ನವಸಾಕ್ಷರ ಪುಸ್ತಕ ಮಾಲೆ ೨

ಟಿಪ್ಪು ಸುಲ್ತಾನ್

ಎಂ. ರಾಜು



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೨

ಟಿಪ್ಪೂ ಸುಲ್ತಾನ್

ಎಂ. ರಾಜು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ - ೫೮೩ ೨೭೬

TIPPU SULTAN : By M. Raju, Published by The Director of Prasaranga, Kannada University, Hampi - 583 211, Karnataka.
First Impression 1994, Pp. ii + 26, Price : Rs. 8.00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮುರಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
೮/೧. ಮಾರೇನಹಳ್ಳಿ, ೧ನೇ ಕ್ರಾಸ್, ೨೩ನೇ ಮೇನ್,
ಜೆ. ಪಿ. ನಗರ, ಬೆಂಗಳೂರು - ೫೬೦ ೦೭೮.
ಫೋನ್ : ೬೬೩೧೦೨

ಟಿಪ್ಪೂ ಸುಲ್ತಾನ್

'**ಟಿ**ಪ್ಪೂ ಸುಲ್ತಾನ್' ಈ ಹೆಸರನ್ನು ಕೇಳದವರು ಯಾರು? ಟಿಪ್ಪೂ ಸುಲ್ತಾನನನ್ನು'ಮೈಸೂರು ಹುಲಿ' ಎಂದೂ ಕರೆಯುತ್ತಾರೆ. ಕರ್ನಾಟಕದಲ್ಲಂತೂ ಟಿಪ್ಪೂ ಒಂದು ದಂತಕಥೆ. ಟಿಪ್ಪೂ ಒಬ್ಬ ಮಹಾವೀರ. ಬ್ರಿಟಿಷರ ವಿರೋಧಿ. ಈತ ತನ್ನ ಛಲ, ಶೌರ್ಯ, ಪರಾಕ್ರಮಗಳಿಗೆ ಹೆಸರಾದವನು. ಬ್ರಿಟಿಷರಿಗೆ ಭಾರತೀಯರ ಪರಾಕ್ರಮದ ರುಚಿಯನ್ನು ತೋರಿಸಿದವನು. ಟಿಪ್ಪೂ ಮತ್ತು ಅವನ ತಂದೆ ಹೈದರ್ ಆಲಿಖಾನ್ ಇಬ್ಬರೂ ಮೈಸೂರು ರಾಜ್ಯಕ್ಕೆ ಕೀರ್ತಿ ತಂದವರು. ಮೈಸೂರು ರಾಜ್ಯದ ಹೆಸರನ್ನು ದೂರ ದೂರದ ದೇಶಗಳವರೆಗೂ ಹರಡಿದವರು. ಹೈದರ್ ಆಲಿಖಾನ್ ಒಬ್ಬ ಸಾಮಾನ್ಯ ಸೈನಿಕ. ಮೈಸೂರಿನ ಸೈನ್ಯವನ್ನು ಸೇರಿದ ಇವನು ತನ್ನ ಸ್ವಂತ ಶಕ್ತಿಯಿಂದ ಮೇಲಕ್ಕೇರಿದ. ಕೊನೆಗೆ ಈತ ಮೈಸೂರಿನ ಸರ್ವಾಧಿಕಾರಿಯೂ ಆದನು. ಹೈದರ್ ಆಲಿಯ ಕಾಲದಲ್ಲಿ ಮೈಸೂರಿನ ಅಧಿಪತ್ಯವು ದಕ್ಷಿಣ ಭಾರತದ ಬಹಳಷ್ಟು ಭಾಗಕ್ಕೆ ಹರಡಿತು. ಆದ್ದರಿಂದ ಹೈದರ್ ಆಲಿಖಾನ್ ಮತ್ತು ಟಿಪ್ಪೂ ಸುಲ್ತಾನರಿಗೆ ಇತಿಹಾಸದಲ್ಲಿ ಒಂದು ವಿಶೇಷ ಸ್ಥಾನವುಂಟು.

ಟಿಪ್ಪೂವಿನ ಬಾಲ್ಯ

ಟಿಪ್ಪೂ ಸುಲ್ತಾನನು ಹೈದರ್ ಆಲಿಖಾನನ ಮಗ. ಟಿಪ್ಪೂ ಹುಟ್ಟಿದ್ದು ಸಾವಿರದ ಏಳುನೂರಾ ಐವತ್ತಮೂರನೆಯ ಇಸವಿ ನವೆಂಬರ್ ಇಪ್ಪತ್ತರಂದು. ಬೆಂಗಳೂರು ಸಮಿಪದ



ಟಿಪ್ಪೂಸುಲ್ತಾನ್

ದೇವನಹಳ್ಳಿಯಲ್ಲಿ. 'ಟಿಪ್ಪೂ ಮಸ್ತಾನ್ ಔಲಿಯ' ಎಂಬ ಸಂತನೊಬ್ಬ ಇದ್ದನು. ಆತನಲ್ಲಿ ಹೈದರ್ ಆಲಿಗೆ ಮತ್ತು ಆತನ ಹೆಂಡತಿಗೆ ತುಂಬ ಭಕ್ತಿ. ಈ ಸಂತನ ಕರುಣೆಯಿಂದಲೇ ಸಂತಾನ ಭಾಗ್ಯ ಲಭಿಸಿದ್ದು ಎಂಬುದು ಹೈದರ್ ದಂಪತಿಗಳ ನಂಬಿಕೆ. ಈ ಸಂತನ ನೆನಪಿಗಾಗಿ ಅವರು ತಮ್ಮ ಮಗುವಿಗೆ ಟಿಪ್ಪೂ ಸುಲ್ತಾನ್ ಎಂದು ಹೆಸರಿಟ್ಟರು. ಟಿಪ್ಪೂವನ್ನು 'ಫತೇ ಆಲಿಖಾನ್' ಎಂದೂ ಕರೆಯುತ್ತಿದ್ದರು. ಟಿಪ್ಪೂವಿನ ತಾಯಿ ಹುಟ್ಟಿನಿಂದ ಒಬ್ಬ ಹಿಂದೂ. ಹೈದರನು ಎಲ್ಲ ಧರ್ಮಗಳನ್ನು ಗೌರವಿಸುತ್ತಿದ್ದನು ಎಂಬುದಕ್ಕೆ ಇದೊಂದು ಕಾರಣವಿರಬಹುದು. ಹೈದರನು ಓದು ಬರಹಗಳನ್ನು ಅರಿಯದವನು. ಆದರೆ ಮಗನಾದ ಟಿಪ್ಪೂವಿಗೆ ಆತ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದ. ಟಿಪ್ಪೂ ಓದು ಬರಹದ ಜೊತೆಗೆ ಕತ್ತಿವರಸೆ, ಕುದುರೆ ಸವಾರಿ ಮುಂತಾದ ಯುದ್ಧ ಕಲೆಗಳನ್ನು ಕರಗತ ಮಾಡಿಕೊಂಡ. ರಾಜನೀತಿಯಲ್ಲೂ ಸಹ ಪರಿಣತನಾದ.

ರಣರಂಗದ ಪರಿಚಯ

ಟಿಪ್ಪೂಗೆ ಬಾಲ್ಯದಿಂದಲೇ ರಣರಂಗದ ಪರಿಚಯವಾಯಿತು. ಈತನಿಗೆ ಬದುಕೇ ಹೋರಾಟವಾಗಿತ್ತು. ಹದಿಮೂರು ವರ್ಷದ ಬಾಲಕನಾಗಿದ್ದಾಗಲೇ ಟಿಪ್ಪೂ ಮಲಬಾರಿನ ಯುದ್ಧಗಳಲ್ಲಿ ಭಾಗವಹಿಸಿದ್ದ. ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪೂ ಭಾಗವಹಿಸಿದ್ದ. ಮರಾಠ ಮೈಸೂರು ಯುದ್ಧಗಳಲ್ಲೂ ಟಿಪ್ಪೂ ತನ್ನ ಪರಾಕ್ರಮವನ್ನು ತೋರಿಸಿದ. ಎರಡನೆ ಮೈಸೂರು ಯುದ್ಧ ನಡೆಯಿತು. ಈ ಯುದ್ಧ 'ಪೊಳ್ಳಲೂರು' ರಣರಂಗದಲ್ಲಿ ನಡೆಯಿತು. ಅಲ್ಲಿ ಟಿಪ್ಪೂ 'ಕರ್ನಲ್ ಬೈಲಿ' ಎಂಬಾತನನ್ನು ಸೆರೆ ಹಿಡಿದ. ಅನ್ನಂಗುಡಿ ಕದನದಲ್ಲಿ ಕರ್ನಲ್ 'ಬ್ರೈತ್ ವೈಟ'ನನ್ನು ಸೋಲಿಸಿದ. ಇವೆಲ್ಲ ಟಿಪ್ಪೂವಿನ ಕಿರಿಯ ವಯಸ್ಸಿನ ಸಾಧನೆಗಳು. ಈ ಯುದ್ಧಗಳು ಮುಗಿದಾಗ ಮಲಬಾರಿನ ದಂಗೆಗಳು ಪ್ರಾರಂಭವಾದವು. ಮಲಬಾರ್ ದಂಗೆಗಳನ್ನು ಅಡಗಿಸಲು ಹೈದರಾಲಿಯು ಟಿಪ್ಪೂವನ್ನು ಕಳುಹಿಸಿದನು.

ಹೈದರ್ ಆಲಿಯ ಮರಣ


ಟಿಪ್ಪೂ ಮಲಬಾರಿನಲ್ಲಿದ್ದಾಗ ಹೈದರ್ ಆಲಿಯ ಮರಣದ ಸುದ್ದಿ ಬಂದಿತು. ತಂದೆಯ ಸಾವಿನ ಸುದ್ದಿಯಿಂದ ಟಿಪ್ಪೂವಿಗೆ ಬಹಳ ದುಃಖವಾಯಿತು. ಆದರೆ ಟಿಪ್ಪೂ

ಕೈಕಟ್ಟಿ ಕೂರುವಂತಿರಲಿಲ್ಲ. ಆತ ಕೂಡಲೆ ಹೊರಟನು. ಮೈಸೂರಿನ ಸೈನ್ಯ ಆಗ ಪೆನ್ನಾರ್ ನದಿ ದಡದ 'ಚಿಕ್ಕಮಾಲೂರು' ಎಂಬಲ್ಲಿ ಬೀಡು ಬಿಟ್ಟಿತ್ತು. ಟಿಪ್ಪೂವು ಚಿಕ್ಕಮಾಲೂರಿಗೆ ತಲುಪಿದನು. ಸೇನೆಯ ದಂಡನಾಯಕತ್ವವನ್ನು ವಹಿಸಿಕೊಂಡನು. ಟಿಪ್ಪೂ ಅಧಿಕಾರ ವಹಿಸಿಕೊಂಡಾಗ ಮೈಸೂರು ರಾಜ್ಯವು ಒಂದು ಲಕ್ಷ ಚದರ ಮೈಲು ವಿಸ್ತಾರವಾಗಿತ್ತು.

ಹೈದರ್ ಆಲಿಯು ಮರಣಹೊಂದಿದ್ದು ಬೆನ್ನು ಫಣಿಯ ರೋಗದಿಂದ. ಸಾವು ಸಮೀಪಿಸಿದಾಗ ಹೈದರನು ತನ್ನ ಆಪ್ತರನ್ನು ಕರೆಸಿಕೊಂಡನು. ಅಬೂಮಹಮದ್, ಮಂತ್ರಿ ಪೂರ್ಣಯ್ಯ, ಅಂಚೆ ಶಾಮಯ್ಯ, ಮೀರ್ ಮಹಮದ್ ಸಾದಕ್ ಮುಂತಾದವರು ಹೈದರನ ಆಪ್ತರು. ಈ ಆಪ್ತರನ್ನು ಕುರಿತು ಹೈದರನು ಹೀಗೆ ಹೇಳಿದನು "ನನ್ನ ಸಾವು ಸಮೀಪಿಸಿದೆ. ನಾನು ಸಾಯುವುದು ಖಚಿತ. ಕೂಡಲೆ ಟಿಪ್ಪೂವನ್ನು ಕರೆಸಿಕೊಳ್ಳಿ, ಅವನಿಗೆ ಚೆನ್ನಾಗಿ ಬುದ್ಧಿವಾದ ಹೇಳಿ. ಆನಂತರ ಅವನಿಗೆ ಪಟ್ಟಕಟ್ಟಿ. ಇದು ರಹಸ್ಯವಾಗಿರಲಿ". ಹೈದರನ ಆಪ್ತರು ಈ ಮಾತುಗಳನ್ನು ಉಳಿಸಿದರು.

ಮಂತ್ರಿ ಪೂರ್ಣಯ್ಯ

ಈ ಸಮಯದಲ್ಲಿ ಮಂತ್ರಿ ಪೂರ್ಣಯ್ಯನು ಚಾಣಾಕ್ಷತನ ಮತ್ತು ನಿಷ್ಠೆಯನ್ನು ತೋರಿಸಿದನು. ಪೂರ್ಣಯ್ಯನ ಚಾಣಾಕ್ಷತನ ತುಂಬ ಪ್ರಸಿದ್ಧವಾದುದು. ಏಕಾಏಕಿ ಹೈದರನ ಮರಣವಾರ್ತೆ ಪ್ರಕಟವಾದರೆ ರಾಜ್ಯಕ್ಕೆ ತೊಂದರೆ ಬರುತ್ತಿತ್ತು. ಸಾಮಂತರಾಜರು ಬಂಡೇಳುತ್ತಿದ್ದರು. ಮರಾಠರು, ಬ್ರಿಟಿಷರು, ಹೈದರಾಬಾದಿನ ನಿಜಾಮ ಇವರು ಮೈಸೂರಿನ ಶತ್ರುಗಳಾಗಿದ್ದರು. ಈ ಶತ್ರುಗಳು ರಾಜ್ಯವನ್ನು ಮುತ್ತಬಹುದಿತ್ತು. ಪೂರ್ಣಯ್ಯನು ಇದನ್ನು ಊಹಿಸಿದನು. ಹೈದರ್ ಆಲಿಯ ಮರಣದ ವಾರ್ತೆಯನ್ನು ಗುಟ್ಟಾಗಿ ಇರಿಸಿದನು. ಪ್ರತಿದಿನ ಹೈದರನ ಶವವನ್ನು ಇರಿಸಿದ್ದ ಡೇರೆಗೆ ಹೋಗಿ ಬರುತ್ತಿದ್ದನು. ಹೈದರನ ಆರೋಗ್ಯ ಕೆಟ್ಟಿದೆ, ವಿಚಾರಿಸಲು ಪೂರ್ಣಯ್ಯನು ನಿತ್ಯವೂ ಹೋಗಿ ಬರುತ್ತಿದ್ದಾನೆ ಎಂದು ಎಲ್ಲರೂ ಭಾವಿಸಿದರು. ಇದರಿಂದ ರಾಜ್ಯಕ್ಕೆ ಯಾವುದೇ ರೀತಿಯ ತೊಂದರೆ ಉಂಟಾಗಲಿಲ್ಲ. ಟಿಪ್ಪೂ ಬಂದ ನಂತರ ಹೈದರನ ಮರಣವಾರ್ತೆ ಬಹಿರಂಗವಾಯಿತು. ಈ ರೀತಿ ಯಾವುದೇ ತೊಂದರೆಯಿಲ್ಲದೆ ಅಧಿಕಾರವು ಟಿಪ್ಪೂವಿನ ಕೈಗೆ ಬಂದಿತು.



ಟಿಪ್ಪೂ ಅರಮನೆ

ಟಿಪ್ಪೂವಿಗೆ ಅಧಿಕಾರವೇನೋ ಸುಲಭವಾಗಿ ಕೈಗೆ ಬಂದಿತು. ಆದರೆ ಅಧಿಕಾರದ ಜೊತೆಗೆ ಸಮಸ್ಯೆಗಳೂ ಬಂದವು. ಒಂದು ಕಡೆ ಹೈದರಾಬಾದಿನ ನಿಜಾಮ. ಇನ್ನೊಂದು ಕಡೆ ಮರಾಠರು. ಮತ್ತೊಂದು ಕಡೆ ಬ್ರಿಟಿಷರು. ಇವರೆಲ್ಲ ಹೈದರ್ ಆಲಿಯು ಸಾಯುವುದನ್ನೇ ಕಾಯುತ್ತಿದ್ದರು. ಆದರೆ ಟಿಪ್ಪೂ ಸಮರ್ಥ. ಇವರ ಆಟ ನಡೆಯಗೊಡಲಿಲ್ಲ. ಬಿದನೂರು ಮತ್ತು ಇತರ ಕೆಲವು ಚಿಕ್ಕ ಕೋಟೆಗಳನ್ನು ಬ್ರಿಟಿಷರು ವಶಪಡಿಸಿಕೊಂಡರು. ಆದರೆ ಟಿಪ್ಪೂ ಬಿದನೂರನ್ನು ಪುನಃ ವಶಪಡಿಸಿಕೊಂಡನು.

ಮಂಗಳೂರು ಒಪ್ಪಂದ

ಬಿದನೂರನ್ನು ವಶಪಡಿಸಿಕೊಂಡ ನಂತರ ಟಿಪ್ಪೂ ಮಂಗಳೂರಿನ ಕಡೆಗೆ ಮುನ್ನಡೆದನು. ಮಂಗಳೂರಿಗೆ ಮುತ್ತಿಗೆ ಹಾಕಿದನು. ಬ್ರಿಟಿಷರು ಸೋಲೊಪ್ಪಬೇಕಾಯಿತು. ಅವರು ಟಿಪ್ಪೂವಿನ ಜೊತೆಗೆ ಒಪ್ಪಂದ ಮಾಡಿಕೊಂಡರು. ಟಿಪ್ಪೂವಿನ ಎಲ್ಲ ಷರತ್ತುಗಳಿಗೂ ಒಪ್ಪಿಕೊಂಡರು. ಇದೇ ಮಂಗಳೂರು ಒಪ್ಪಂದ. ಇಲ್ಲಿಯವರೆಗೆ ಬ್ರಿಟಿಷರು ಎಂದೂ ಸೋಲುವುದಿಲ್ಲ ಎಂಬ ಭಾವನೆಯಿತ್ತು. ಮಂಗಳೂರು ಒಪ್ಪಂದದಿಂದ ಈ ನಂಬಿಕೆ ಸುಳ್ಳಾಯಿತು. ಬ್ರಿಟಿಷರಿಗೆ ಇದರಿಂದ ಬಹಳ ಅವಮಾನವಾಯಿತು. ಆಗ ಮೈಸೂರು ರಾಜ್ಯವು ಪ್ರಬಲವಾಗಿತ್ತು. ಒಳ್ಳೆಯ ಆಳ್ವಿಕೆಯಿಂದ ಕೂಡಿ ಪ್ರಗತಿ ಹೊಂದುತ್ತಿತ್ತು.

ಕಾರ್ನ್‌ವಾಲೀಸ್

ಇಂತಹ ಸಂದರ್ಭದಲ್ಲಿ ಕಾರ್ನ್‌ವಾಲೀಸನು ಗೌರ್ನರ್ ಜನರಲ್ಲನಾಗಿ ಬಂದನು. ಹೇಗಾದರೂ ಮಾಡಿ ಟಿಪ್ಪೂವಿನ ಪ್ರಗತಿಯನ್ನು ತಡೆಯಬೇಕೆಂಬುದು ಅವನ ಬಯಕೆ. ಕಾರ್ನ್‌ವಾಲೀಸ್ ಒಬ್ಬ ಮಹತ್ವಾಕಾಂಕ್ಷಿ. ಇವನಿಗೆ ಬ್ರಿಟಿಷ್ ರಾಜ್ಯವನ್ನು ವಿಸ್ತರಿಸುವ ಆಸೆ. ಈ ಆಸೆಗೆ ಟಿಪ್ಪೂ ಅಡ್ಡಿಯಾಗಿದ್ದನು. ಹೇಗಾದರೂ ಮಾಡಿ ಟಿಪ್ಪೂವನ್ನು ಸೋಲಿಸಬೇಕೆಂದು ಕಾರ್ನ್‌ವಾಲೀಸನು ಯೋಚಿಸಿದನು.

ಸಾಮಂತರ ದಂಗೆ

ಟಿಪ್ಪೂ ಮತ್ತು ಬ್ರಿಟಿಷರ ನಡುವಿನ ಹೋರಾಟ ನಮಗೆ ತಿಳಿದಿದೆ. ಅನೇಕ ಸಾಮಂತ ರಾಜರು ಇದರ ಲಾಭ ಪಡೆಯುವ ಪ್ರಯತ್ನ ಮಾಡಿದರು. ಮಂಜರಾಬಾದ್

ಬಳಿಯ ಬಲಿಮುರಾಜ ಮತ್ತು ಕೊಡಗಿನ ರಾಜ ಸ್ವಾತಂತ್ರ್ಯ ಘೋಷಿಸಿಕೊಂಡರು. ಟಿಪ್ಪೂ ಇವರನ್ನು ದಂಡಿಸಲು ನಿರ್ಧರಿಸಿದ. ಮಂಗಳೂರು ಒಪ್ಪಂದ ಮುಗಿಸಿ ಟಿಪ್ಪೂ ಈ ರಾಜ್ಯಗಳ ಕಡೆ ಗಮನ ಹರಿಸಿದ. ಇವರನ್ನು ಸೋಲಿಸಿ ತನ್ನ ಅಧಿಕಾರ ಸ್ಥಾಪಿಸಿದ.

ಮರಾಠರ ನಾನಾ ಫಡ್ನವೀಸನಿಗೆ ಟಿಪ್ಪೂ ಮೇಲೆ ದ್ವೇಷ. ಟಿಪ್ಪೂವಿನ ವಿರುದ್ಧ ಬ್ರಿಟಿಷರ ಜೊತೆ ಒಪ್ಪಂದ ಮಾಡಿಕೊಳ್ಳುವ ಆಸೆ ಆತನದು. ಮಂಗಳೂರು ಒಪ್ಪಂದದಿಂದ ಫಡ್ನವೀಸನ ಆಸೆಗೆ ಕಲ್ಲು ಬಿದ್ದಿತ್ತು. ಹೈದರಾಬಾದಿನ ನಿಜಾಮನಿಗೂ ಟಿಪ್ಪೂ ಬಗ್ಗೆ ಮತ್ಸರವಿತ್ತು. ಇದರಿಂದ ನಾನಾ ಫಡ್ನವೀಸ್ ಮತ್ತು ಹೈದರಾಬಾದಿನ ನಿಜಾಮ ಒಂದಾದರು. ಅವರು ಒಂದು ಒಪ್ಪಂದ ಮಾಡಿಕೊಂಡರು. ಮರಾಠರ ಸೈನ್ಯ ಮತ್ತು ನಿಜಾಮನ ಸೈನ್ಯ ಒಂದಾಗಬೇಕು. ಒಂದಾಗಿ ಮೈಸೂರು ರಾಜ್ಯವನ್ನು ಮುತ್ತಬೇಕು. ಅನಂತರ ಗೆದ್ದ ಪ್ರದೇಶಗಳನ್ನು ಹಂಚಿಕೊಳ್ಳಬೇಕು. ಇದೇ ಆ ಒಪ್ಪಂದದ ಕರಾರುಗಳು. ಯುದ್ಧ ಘೋಷಿಸಲು ಇವರಿಗೊಂದು ನೆಪ ಬೇಕಾಗಿತ್ತು. ಇಂಥ ಸಮಯದಲ್ಲಿ ಟಿಪ್ಪೂ ನರಗುಂದದ ಕೋಟೆಯನ್ನು ಮುತ್ತಿದನು. ಇದರಿಂದ ಮರಾಠರಿಗೆ ಯುದ್ಧ ಘೋಷಿಸಲು ಬೇಕಾದ ನೆಪ ದೊರೆಯಿತು.

ವೆಂಕಟರಾವ್ ಭಾವೆಯು ನರಗುಂದದ ದೇಸಾಯಿ. ಇವನು ಹೈದರ್ ಆಲಿಯ ಸಾಮಂತನಾಗಿದ್ದನು. ಆದರೂ ಒಳಗೊಳಗೇ ನಾನಾ ಫಡ್ನವೀಸನ ಸ್ನೇಹ ಬೆಳೆಸುತ್ತಿದ್ದನು. ಈ ಪಿತೂರಿಯ ವಿಚಾರ ಟಿಪ್ಪೂಗೆ ತಿಳಿಯಿತು. ಅವನು ಕೋಪಗೊಂಡನು. ದೇಸಾಯಿಯ ವಿರುದ್ಧ ಸೈನ್ಯವನ್ನು ಕಳುಹಿಸಿದನು. ನರಗುಂದವನ್ನು ವಶಪಡಿಸಿಕೊಂಡನು. ಟಿಪ್ಪೂ ಅಲ್ಲಿಂದ ಮುಂದುವರಿದನು. ದೋದ್‌ವದ್, ಖಾನಾಪುರ, ಸಾಡಾ, ಹೊಸಕೋಟೆಗಳನ್ನು ಅವನು ವಶಪಡಿಸಿಕೊಂಡನು. ಪಾದ್‌ಷಾಪುರ, ಜಾಂಬೋಟೆಗಳೂ ಟಿಪ್ಪೂವಿನ ವಶವಾದವು. ಇವೆಲ್ಲ ಮರಾಠರ ವಶದಲ್ಲಿದ್ದ ಪ್ರದೇಶಗಳಾಗಿದ್ದವು. ಇದರಿಂದ ಘಾಸಿಗೊಂಡ ನಾನಾ ಫಡ್ನವೀಸನು ನಿಜಾಮನ ಜೊತೆ ಸೇರಿ ಟಿಪ್ಪೂವನ್ನು ಎದುರಿಸಿದನು. ಹೀಗೆ ಒಂದಾದ ಶತ್ರು ಸೈನ್ಯ ಮೈಸೂರು ರಾಜ್ಯದ ಮೇಲೆ ದಾಳಿ ನಡೆಸಿತು. ಈ ಸೈನ್ಯ ಬಾದಾಮಿ ಗಜೇಂದ್ರಗಡಗಳನ್ನು ಮುತ್ತಿತು. ಟಿಪ್ಪೂ ಸಹ ಇದಕ್ಕೆ ಉತ್ತರ ನೀಡಿದ. ಅವನು ಆದವಾನಿ ಕೋಟೆಯನ್ನು ಮುತ್ತಿದ. ಆದವಾನಿ ಕೋಟೆಯು ನಿಜಾಮನ ವಶದಲ್ಲಿತ್ತು. ಈ ರೀತಿ ಯುದ್ಧವು ಒಂದು ವರ್ಷ ಮುಂದುವರಿಯಿತು.

ಈ ಯುದ್ಧದಿಂದ ಯಾರಿಗೂ ಲಾಭವಾಗಲಿಲ್ಲ. ಟಿಪ್ಪೂಗೆ ಈ ಯುದ್ಧ ಅನುಕೂಲವಾಗಿತ್ತು. ಆದರೂ ಟಿಪ್ಪೂ ನಿಜಾಮ ಮತ್ತು ಮರಾಠರೊಡನೆ ಒಪ್ಪಂದ ಮಾಡಿಕೊಂಡ. ಯುದ್ಧ ನಿಲುಗಡೆಯಾಯಿತು. ನರಗುಂದ, ಕಿತ್ತೂರು, ಬಾದಾಮಿಗಳನ್ನು ಟಿಪ್ಪೂ ಬಿಟ್ಟುಕೊಟ್ಟ. ಟಿಪ್ಪೂಗೆ ನೆರೆ ರಾಜ್ಯಗಳ ಜೊತೆಗೆ ಶತ್ರುತ್ವ ಬೇಕಿರಲಿಲ್ಲ. ಬ್ರಿಟಿಷರೇ ಟಿಪ್ಪೂವಿನ ನಿಜವಾದ ಶತ್ರುಗಳು. ಬ್ರಿಟಿಷರ ಜೊತೆ ಹೋರಾಡಲು ಅವನಿಗೆ ನೆರೆ ರಾಜ್ಯಗಳ ಸಹಕಾರ ಬೇಕಿತ್ತು. ಇದರಿಂದ ಟಿಪ್ಪೂ ಉದಾರಿಯಾಗಿ ನಡೆದುಕೊಂಡ.

ಮೂರನೆಯ ಮೈಸೂರು ಯುದ್ಧ

ಕಾರ್ನ್‌ವಾಲೀಸನ ಬಗ್ಗೆ ನಮಗೆ ಈಗಾಗಲೇ ತಿಳಿದಿದೆ. ಅವನ ಮಹತ್ವಾಕಾಂಕ್ಷೆಯ ಬಗ್ಗೆಯೂ ತಿಳಿದಿದೆ. ಅವನೊಬ್ಬ ಕುತಂತ್ರಿ. ಅವನದು ಒಡೆದು ಆಳುವ ನೀತಿ. ನಿಜಾಮ ಮತ್ತು ಮರಾಠರಿಗೆ ಟಿಪ್ಪೂವಿನ ಬಗ್ಗೆ ದ್ವೇಷವಿತ್ತು. ಇದು ಕಾರ್ನ್‌ವಾಲೀಸನಿಗೆ ತಿಳಿದಿತ್ತು. ಅವನು ಇದರ ಲಾಭ ಪಡೆಯಲು ನಿರ್ಧರಿಸಿದ. ಅವನು ನಿಜಾಮ ಮತ್ತು ಮರಾಠರ ಜೊತೆ ಒಂದು ಒಪ್ಪಂದಕ್ಕೆ ಮುಂದಾದ. ಬ್ರಿಟಿಷರು, ಮರಾಠರು, ಹೈದರಾಬಾದಿನ ನಿಜಾಮ ಒಂದಾಗಬೇಕು. ಟಿಪ್ಪೂವಿನ ವಿರುದ್ಧ ಯುದ್ಧ ಮಾಡಬೇಕು. ಗೆದ್ದ ಪ್ರದೇಶಗಳನ್ನು ಅವರೆಲ್ಲ ಹಂಚಿಕೊಳ್ಳಬೇಕು. ಇದೇ ಒಪ್ಪಂದದ ತಿರುಳು. ನಿಜಾಮ ಮತ್ತು ಮರಾಠರು ಬಹಳ ಶಕ್ತಿವಂತರಾಗಿರಲಿಲ್ಲ. ಹೆಚ್ಚು ಸೈನ್ಯ ಕಳುಹಿಸುವ ಶಕ್ತಿ ಅವರಿಗೆ ಇರಲಿಲ್ಲ. ಆದರೆ ಕಾರ್ನ್‌ವಾಲೀಸನಿಗೆ ಇದು ಮುಖ್ಯವಲ್ಲ. ನಿಜಾಮ ಮತ್ತು ಮರಾಠರು ಟಿಪ್ಪೂವಿನ ಜೊತೆ ಒಂದಾಗಬಾರದು. ಇದೇ ಅವನಿಗೆ ಬೇಕಾಗಿದ್ದುದು. ಇದೇ ಬ್ರಿಟಿಷರ ಒಡೆದು ಆಳುವ ನೀತಿ. ಟಿಪ್ಪೂ ಸಹ ತನ್ನ ಪ್ರತಿನಿಧಿಗಳನ್ನು ಕಳುಹಿಸಿದನು. ಈ ಒಪ್ಪಂದವನ್ನು ತಡೆಯಲು ಯತ್ನಿಸಿದನು. ಆದರೆ ಅದು ಸಾಧ್ಯವಾಗಲಿಲ್ಲ.

ತಿರುವಾಂಕೂರು

ಆಗ ಬ್ರಿಟಿಷರಿಗೆ ಯುದ್ಧ ಹೂಡಲು ನೆಪ ಬೇಕಾಗಿತ್ತು. ಟಿಪ್ಪೂ ತಿರುವಾಂಕೂರನ್ನು ಆಕ್ರಮಿಸಿದ್ದು ಯುದ್ಧಕ್ಕೆ ಕಾರಣವಾಯಿತು. ತಿರುವಾಂಕೂರು ಬ್ರಿಟಿಷರ ಮಿತ್ರರಾಜ್ಯವಾಗಿತ್ತು. ಕೊಚ್ಚಿಯು ತಿರುವಾಂಕೂರಿನ ನೆರೆರಾಜ್ಯ. ಕೊಚ್ಚಿಯ ರಾಜ ಮೈಸೂರು ರಾಜ್ಯದ ಸಾಮಂತ.

ತಿರುವಾಂಕೂರಿನ ರಾಜ ಕೊಚ್ಚಿಯ ಗಡಿಯನ್ನು ದಾಟಿ ಬಂದ. ಅಲ್ಲಿ ತನ್ನ ಗಡಿ ರಕ್ಷಣೆಯ ಬೇಲಿಯನ್ನು ನಿರ್ಮಿಸಿದ. ಇದರಿಂದ ಟಿಪ್ಪೂವಿಗೆ ಸಿಟ್ಟು ಬಂತು. ಹಿಂದಿನಿಂದಲೂ ಟಿಪ್ಪೂವಿಗೂ, ತಿರುವಾಂಕೂರು ರಾಜನಿಗೂ ದ್ವೇಷವಿತ್ತು. ಅಯಕೊಟ್ಟ ಮತ್ತು ಕಾಂಗವಾಗೂರ್ ಕೋಟೆಗಳು ಫ್ರೆಂಚರ ಆಡಳಿತದಲ್ಲಿದ್ದವು. ಟಿಪ್ಪೂವಿಗೂ ಈ ಕೋಟೆಗಳ ಮೇಲೆ ಕಣ್ಣಿತ್ತು. ಈ ಕೋಟೆಗಳನ್ನು ತಿರುವಾಂಕೂರಿನ ರಾಜ ಕೊಂಡುಕೊಂಡ. ಇದೂ ಟಿಪ್ಪೂವಿನ ಅಸಮಾಧಾನಕ್ಕೊಂದು ಕಾರಣವಾಗಿತ್ತು. ಹಿಂದೆ ಮಲಬಾರಿನ ನಾಯರ್‌ಗಳು ದಂಗೆಯೆದ್ದಿದ್ದರು. ಅವರಿಗೆ ತಿರುವಾಂಕೂರಿನ ರಾಜ ಆಶ್ರಯ ನೀಡಿದ್ದ. ಇದರಿಂದಲೂ ಟಿಪ್ಪೂವಿಗೆ ಬೇಸರವಿತ್ತು. ಇವೆಲ್ಲ ಹಿನ್ನೆಲೆಗಳು.

ತಿರುವಾಂಕೂರಿನ ರಾಜ ಕೊಚ್ಚಿ ಗಡಿಯಲ್ಲಿ ನಿರ್ಮಿಸುತ್ತಿದ್ದ ಬೇಲಿಯನ್ನು ತೆಗೆಯುವಂತೆ ಟಿಪ್ಪೂ ತಿಳಿಸಿದ. ತಿರುವಾಂಕೂರಿನ ರಾಜ ಒಪ್ಪಲಿಲ್ಲ. ಟಿಪ್ಪೂ ತಿರುವಾಂಕೂರಿನ ಮೇಲೆ ಯುದ್ಧ ಘೋಷಿಸಿದ. ತಿರುವಾಂಕೂರನ್ನು ಮುತ್ತಿದ. ಬ್ರಿಟಿಷರು ತಿರುವಾಂಕೂರಿನ ಸಹಾಯಕ್ಕೆ ಬಂದರು. ಬ್ರಿಟಿಷ್ ಸೈನ್ಯ ಮದ್ರಾಸಿನಿಂದ ಬಂದಿತು. ದಿಂಡಿಗಲ್, ಕೊಯಮತ್ತೂರು, ಪಾಲ್‌ಘಾಟ್‌ಗಳನ್ನು ವಶಪಡಿಸಿಕೊಂಡಿತು. ಈ ಸಮಯದಲ್ಲಿ ಟಿಪ್ಪೂ ತಿರುವಾಂಕೂರಿನಲ್ಲಿದ್ದ. ಅವನಿಗೆ ಬ್ರಿಟಿಷ್ ಸೈನ್ಯ ಬಂದ ಸುದ್ದಿ ತಿಳಿಯಿತು. ಟಿಪ್ಪೂ ಶ್ರೀರಂಗಪಟ್ಟಣಕ್ಕೆ ಧಾವಿಸಿದ. ಸೈನ್ಯ ಜಮಾವಣೆ ಮಾಡಿಕೊಂಡ. ಬ್ರಿಟಿಷ್ ಸೈನ್ಯವನ್ನು ಗಜಲಹಟ್ಟಿ ಕಣಿವೆಯಲ್ಲಿ ಎದುರಿಸಿದ. ಸತ್ಯಮಂಗಲದಲ್ಲಿದ್ದ ಮತ್ತೊಂದು ಸೈನ್ಯವನ್ನೂ ಟಿಪ್ಪೂ ಎದುರಿಸಿದ. ಟಿಪ್ಪೂವಿನ ಸೈನ್ಯವನ್ನು ಎದುರಿಸಲಾರದೆ ಇಂಗ್ಲಿಷರು ಹಿಮ್ಮೆಟ್ಟಿದರು. ಧರ್ಮಪುರಂ ಮತ್ತು ಕರೂರುಗಳು ಬ್ರಿಟಿಷರ ವಶವಾಗಿದ್ದವು. ಅವನ್ನೂ ಟಿಪ್ಪೂ ಪುನಃ ವಶಪಡಿಸಿಕೊಂಡ. ನಂತರ ಕೃಷ್ಣಗಿರಿಯ ಕಡೆಗೆ ಹೊರಟ. ಕೃಷ್ಣಗಿರಿಯಲ್ಲಿ ಬ್ರಿಟಿಷ್ ಸೈನ್ಯ ಬೀಡು ಬಿಟ್ಟಿತ್ತು. ಮೈಸೂರಿನ ಸೇನೆ ಮತ್ತು ಬ್ರಿಟಿಷ್ ಸೇನೆಗಳ ನಡುವೆ ಸಣ್ಣ ಪುಟ್ಟ ಕದನಗಳು ನಡೆದವು. ಆದರೆ ಭಾರೀ ಯುದ್ಧವೇನೂ ಸಂಭವಿಸಲಿಲ್ಲ. ಟಿಪ್ಪೂ ತಿರುಚಿನಾಪಳ್ಳಿ ಶ್ರೀರಂಗಂಗಳನ್ನು ವಶಪಡಿಸಿಕೊಂಡ. ನಂತರ ಪಾಂಡಿಚೇರಿಯನ್ನು ತಲುಪಿದ. ಪಾಂಡಿಚೇರಿಯಲ್ಲಿ ಫ್ರೆಂಚ್ ನೆಲೆಯಿತ್ತು. ಅಲ್ಲಿಂದ ಫ್ರಾನ್ಸ್ ದೇಶದೊಡನೆ ಸಂಪರ್ಕ ಬೆಳೆಸಿದ. ಫ್ರೆಂಚರ ಸಹಾಯ ಪಡೆಯುವ ಹಂಚಿಕೆ ಟಿಪ್ಪೂವಿನದಾಗಿತ್ತು. ಆದರೆ ಫ್ರಾನ್ಸ್ ತಾನೇ ಕ್ರಾಂತಿಯ ಸುಳಿಯಲ್ಲಿ ಸಿಲುಕಿಕೊಂಡಿತ್ತು. ಟಿಪ್ಪೂವಿಗೆ ಯಾವುದೇ ಸಹಾಯ ದೊರೆಯಲಿಲ್ಲ.

ಈ ಸಮಯಕ್ಕೆ ಬೊಂಬಾಯಿಯಿಂದ ಬ್ರಿಟಿಷ್ ಸೈನ್ಯವು ಮೈಸೂರಿನ ಕಡೆಗೆ ಹೊರಟಿತ್ತು. ಈ ಸೈನ್ಯ ಕರಾವಳಿಯನ್ನು ಹಾದು ಬರುತ್ತಿತ್ತು. ಈಗ ಟಿಪ್ಪೂ ಎಲ್ಲ ದಿಕ್ಕುಗಳಿಂದಲೂ ಶತ್ರುಗಳನ್ನು ಎದುರಿಸಬೇಕಿತ್ತು. ಟಿಪ್ಪೂ ಎದೆಗುಂದಲಿಲ್ಲ. ಪರಾಕ್ರಮದಿಂದ ಹೋರಾಡುವ ಕೆಚ್ಚು ಪ್ರದರ್ಶಿಸಿದ. ತನ್ನ ಯುದ್ಧತಂತ್ರ ನಿಪುಣತೆಯನ್ನು ತೋರಿದ. ಇದನ್ನೆಲ್ಲ ಕಾರ್ನ್‌ವಾಲೀಸ್ ಗಮನಿಸುತ್ತಿದ್ದ. ಅವನಿಗೆ ವಿಪರೀತ ಚಿಂತೆಯಾಯಿತು. ಕಾರ್ನ್‌ವಾಲೀಸ್ ತಾನೇ ಸೈನ್ಯದ ನಾಯಕನಾಗಲು ನಿರ್ಧರಿಸಿದ.

ಟಿಪ್ಪೂ ಇನ್ನೂ ಪಾಂಡಿಚೇರಿಯಲ್ಲೇ ಇದ್ದ. ಸೋತ ಬ್ರಿಟಿಷ್ ಸೈನ್ಯ ಬೇಗನೆ ಹಿಂದಿರುಗಲಾರದೆಂಬುದು ಟಿಪ್ಪೂವಿನ ಭಾವನೆಯಾಗಿತ್ತು. ಅದು ಸುಳ್ಳಾಯಿತು. ಬ್ರಿಟಿಷ್ ಸೈನ್ಯವು ಮುಗಳಿ ಕಣಿವೆಯ ಮೂಲಕ ಹಾದು ಬಂದಿತ್ತು. ಬೆಂಗಳೂರಿನ ಕಡೆಗೆ ಮುನ್ನಡೆಯುತ್ತಿತ್ತು. ಬೆಂಗಳೂರು, ದೇವನಹಳ್ಳಿ, ಚಿಕ್ಕಬಳ್ಳಾಪುರಗಳು ಇಂಗ್ಲೀಷರ ವಶವಾದವು. ಇದೇ ಸಮಯಕ್ಕೆ ಮರಾಠ ಸೈನ್ಯ ಹುಬ್ಬಳ್ಳಿ, ಗಜೇಂದ್ರಗಢ, ಲಕ್ಷ್ಮೇಶ್ವರಗಳನ್ನು ಆಕ್ರಮಿಸಿಕೊಂಡಿತು. ಶ್ರೀರಂಗಪಟ್ಟಣವನ್ನೇ ವಶಪಡಿಸಿಕೊಂಡು ಯುದ್ಧವನ್ನು ಮುಗಿಸಬೇಕೆಂಬುದು ಕಾರ್ನ್‌ವಾಲೀಸನ ಇರಾದೆಯಾಗಿತ್ತು. ವೇಗವಾಗಿ ಟಿಪ್ಪೂ ಸಹ ಶ್ರೀರಂಗಪಟ್ಟಣದ ರಕ್ಷಣೆಗೆ ಧಾವಿಸಿದ. ಆಗ ಭಾರೀ ಮಳೆ ಪ್ರಾರಂಭವಾಯಿತು. ಬ್ರಿಟಿಷ್ ಪಾಳೆಯದಲ್ಲಿ ಸಿಡುಬಿನ ರೋಗ ಹರಡಿತ್ತು. ಟಿಪ್ಪೂವಿನ ಫಿರಂಗಿ ಏಟುಗಳೂ ಜೋರಾಗಿದ್ದವು. ತತ್ತರಿಸಿದ ಕಾರ್ನ್‌ವಾಲೀಸ್ ಬೆಂಗಳೂರಿಗೆ ಹಿಂದಿರುಗಲು ನಿರ್ಧರಿಸಿದ. ನಿಜಾಮನ ಸೇನೆ ಮತ್ತು ಮರಾಠರ ಸೇನೆಗಳು ತಮ್ಮ ನೆಲೆಗಳಿಗೆ ಹಿಂದಿರುಗಿದವು.

ಕಾರ್ನ್‌ವಾಲೀಸನು ಆಹಾರ ಧಾನ್ಯ ಸಂಗ್ರಹಿಸಿಕೊಂಡ. ಇತರ ಯುದ್ಧ ತಯಾರಿಗಳನ್ನು ನಡೆಸಿದ. ಈ ಸಮಯದಲ್ಲಿ ನಂದಿದುರ್ಗ, ಸಾವನದುರ್ಗಗಳನ್ನು ವಶಪಡಿಸಿಕೊಂಡ. ಟಿಪ್ಪೂ ಈ ಸಂದರ್ಭದಲ್ಲಿ ಕೊಯಮತ್ತೂರಿನ ಮೇಲೆ ಧಾಳಿ ನಡೆಸಿದ. ಲೆಫ್ಟಿನೆಂಟ್ ಚೇಂಬರ್ಸ್‌ನನ್ನು ಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ತಂದ. ಟಿಪ್ಪೂವಿನ ಮಗನಾದ ಫಾತ್‌ಹೈದರನ ನೇತೃತ್ವದಲ್ಲಿ ಒಂದು ಸೇನೆಯಿತ್ತು. ಈ ಸೇನೆ ಗುಣಮಕೊಂಡದಲ್ಲಿ ನಿಜಾಮನ ಸೇನೆಯನ್ನು ಸೋಲಿಸಿತು. ಉತ್ತರದಲ್ಲಿ ಮರಾಠರು ಸಿರಾ, ಬಿದನೂರು, ಶಿವಮೊಗ್ಗಗಳನ್ನು ವಶಪಡಿಸಿಕೊಂಡರು.



ಟಿಪ್ಪೂ ವ್ಯಾಘ್ರಾಸನ

ಮೂರನೆಯ ಹಂತದ ಯುದ್ಧ

ಮೂರನೆಯ ಹಂತದ ಯುದ್ಧಗಳು ಪ್ರಾರಂಭವಾದವು. ಆಗ ಬೊಂಬಾಯಿಯ ಸೇನೆಯೂ ಕಾರ್ನ್‌ವಾಲೀಸನ ಸಹಾಯಕ್ಕೆ ಬಂದಿತು. ಇದರಿಂದ ಕಾರ್ನ್‌ವಾಲೀಸನ ಶಕ್ತಿ ಹೆಚ್ಚಿತು. ಭಾರೀ ಸೈನ್ಯದೊಂದಿಗೆ ಕಾರ್ನ್‌ವಾಲೀಸನು ಶ್ರೀರಂಗಪಟ್ಟಣವನ್ನು ಮುತ್ತಿದನು. ಟಿಪ್ಪೂಗೆ ಸಂಧಾನದ ಹೊರತು ಬೇರೆ ದಾರಿ ಉಳಿಯಲಿಲ್ಲ. ಆದ್ದರಿಂದ ಅವನು ಸಂಧಾನಕ್ಕೆ ಒಪ್ಪಿಕೊಳ್ಳಬೇಕಾಯ್ತು.

ಶ್ರೀರಂಗಪಟ್ಟಣದ ಸಂಧಾನ

ಈ ಸಂಧಾನದ ಷರತ್ತುಗಳು ಟಿಪ್ಪೂವಿಗೆ ಅನುಕೂಲವಾಗಿರಲಿಲ್ಲ. ಇದರಿಂದ ಟಿಪ್ಪೂನ ತೇಜೋವಧೆಯಾಯಿತು. ಇದರ ಪ್ರಕಾರ ಟಿಪ್ಪೂ ತನ್ನ ಅರ್ಧ ರಾಜ್ಯವನ್ನು ಬಿಟ್ಟು ಕೊಡಬೇಕಾಯಿತು. ಮೂರು ಕೋಟಿ ರೂಪಾಯಿಗಳ ಪರಿಹಾರ ನೀಡಬೇಕಾಯಿತು. ದರ್ಬಾರ್ ಖರ್ಚಿಗೆಂದು ಮೂವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಬೊಕ್ಕಸದಲ್ಲಿ ಅಷ್ಟು ಹಣ ಇರಲಿಲ್ಲ. ಹಣ ಸಂದಾಯ ಮಾಡುವವರೆಗೆ ಟಿಪ್ಪೂ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಿರಿಸಬೇಕಾಯಿತು. ಎಲ್ಲಾ ಬ್ರಿಟಿಷ್ ಯುದ್ಧ ಖೈದಿಗಳನ್ನು ಬಿಟ್ಟುಕೊಡಬೇಕಾಯಿತು. ಒಪ್ಪಂದದ ಪ್ರಕಾರ ಬ್ರಿಟಿಷರ ಪ್ರದೇಶಗಳಿಗೆ ತಾಗಿದಂತಿರುವ ಪ್ರದೇಶಗಳನ್ನು ಟಿಪ್ಪೂ ಬಿಟ್ಟುಕೊಡಬೇಕಿತ್ತು. ಹಾಗೇ ಮರಾಠರು ಮತ್ತು ನಿಜಾಮರ ಪ್ರದೇಶದ ಒತ್ತಿಗಿದ್ದ ಊರುಗಳನ್ನೂ ಬಿಡಬೇಕಿತ್ತು. ಬಳ್ಳಾರಿ, ಕೊಡಗು, ಸೇಲಂಗಳು ಯಾರ ಪ್ರದೇಶಕ್ಕೂ ತಾಗಿರಲಿಲ್ಲ. ಆದರೆ ಅವನ್ನೂ ಟಿಪ್ಪೂ ಬಿಟ್ಟು ಕೊಡಬೇಕಾಯಿತು. ಕೃಷ್ಣ, ತುಂಗಭದ್ರೆಯ ನಡುವಿನ ಪ್ರದೇಶಗಳು ಮರಾಠರಿಗೆ ದೊರೆತವು. ಕರ್ನೂಲು, ಕಡಪ, ತುಂಗಭದ್ರೆಯ ಕೆಳಗಿನ ಪ್ರದೇಶಗಳು ನಿಜಾಮನಿಗೆ ದೊರೆಯಿತು. ಹೀಗೆ ಟಿಪ್ಪೂವಿನ ಶಕ್ತಿ ಅರ್ಧ ಕಡಿಮೆಯಾಯಿತು.

ಮೂರನೇ ಮೈಸೂರು ಯುದ್ಧದಲ್ಲಿ ಕೊಡಗಿನ ಪಾತ್ರ

ಕೊಡಗರು ಸ್ವಾತಂತ್ರ್ಯ ಪ್ರಿಯರು. ಶೂರರು. ಯಾರಿಗೂ ಸುಲಭವಾಗಿ ಮಣಿಯುವವರಲ್ಲ. ಅವರು ಆಗಾಗ ಬಂಡೇಳುತ್ತಿದ್ದರು. ಹೈದರಾಲಿಗೂ ಅವರು ಪೂರ್ತಿಯಾಗಿ



ಟಿಪ್ಪೂವಿನ ಮಕ್ಕಳನ್ನು ಬ್ರಿಟಿಷ್ ಸರ್ಕಾರಕ್ಕೆ ಒತ್ತೆ ಇಡುತ್ತಿರುವುದು

ಬಗ್ಗಿರಲಿಲ್ಲ. ಹೈದರ್‌ನ ಮರಣದ ನಂತರ ಕೊಡಗಿನ ರಾಜ ಸ್ವಾತಂತ್ರ್ಯ ಘೋಷಿಸಿಕೊಂಡ. ಆಗ ಟಿಪ್ಪೂ ಅವನನ್ನು ಅಡಗಿಸಿದ ಸುದ್ದಿ ನಮಗೆ ತಿಳಿದಿದೆ. ದಂಗೆಯನ್ನು ಅಡಗಿಸಿದ ನಂತರ ಟಿಪ್ಪೂ ಮಹಮದೀಯ ವಲಸೆಗಾರರನ್ನು ಕರೆತಂದನು. ಅವರನ್ನು ಕೊಡಗಿನಲ್ಲಿ ನೆಲೆಗೊಳಿಸಿದನು. ಕೊಡಗರಲ್ಲಿ ಅಸಮಾಧಾನವಿದ್ದೇ ಇತ್ತು. ವೀರರಾಜನು ಪೆರಿಯಾಪಟ್ಟಣದ ಸೆರೆಯಿಂದ ತಪ್ಪಿಸಿಕೊಂಡನು. ಅವನು ಕೊಡಗಿಗೆ ಬಂದು ನೆಲೆಸಿದನು. ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳತೊಡಗಿದನು. ಟಿಪ್ಪೂ ಇವನ ವಿರುದ್ಧ ಸೈನ್ಯವನ್ನು ಕಳುಹಿಸಿದ. ವೀರರಾಜ ಶೌರ್ಯದಿಂದ ಹೋರಾಡಿದ. ಈ ಸಮಯಕ್ಕೆ ಮಲಬಾರಿನಲ್ಲೂ ದಂಗೆಗಳು ಪ್ರಾರಂಭವಾದವು. ಕೊಡಗು ಟಿಪ್ಪೂವಿನ ಸೈನ್ಯಕ್ಕೆ ವಶವಾಗಲಿಲ್ಲ. ಕ್ರಮೇಣ ವೀರರಾಜನು ಪ್ರಬಲನಾದನು. ಅವನು ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಕೊಡಗು ಟಿಪ್ಪೂವಿನ ಕೈ ತಪ್ಪಿತು.

ಟಿಪ್ಪೂವಿನ ಛಲ

ಟಿಪ್ಪೂಸುಲ್ತಾನನು ಛಲವಂತ. ಎಂಥ ಕಷ್ಟದಲ್ಲೂ ಎದೆಗುಂದುವವನಲ್ಲ. ಕೈಚೆಲ್ಲಿ ಕೂರುವವನಲ್ಲ. ಯುದ್ಧದಿಂದ ಅವನಿಗೆ ಅಪಾರ ಹಾನಿಯಾಗಿತ್ತು. ಅರ್ಧ ರಾಜ್ಯ ಕೈಬಿಟ್ಟು ಹೋಗಿತ್ತು. ಆದರೂ ಟಿಪ್ಪೂ ಚಟುವಟಿಕೆಯಲ್ಲಿ ತೊಡಗಿದ. ಎಲ್ಲ ಸಂಪತ್ತನ್ನು ಒಟ್ಟುಗೂಡಿಸಿ ಬ್ರಿಟಿಷರಿಗೆ ಪರಿಹಾರವನ್ನು ಸಲ್ಲಿಸಿದ. ಒತ್ತೆಯಿಟ್ಟಿದ್ದ ತನ್ನ ಮಕ್ಕಳನ್ನು ಬಿಡಿಸಿಕೊಂಡ. ರಾಜ್ಯದ ಆಡಳಿತದ ಕಡೆ ಗಮನ ಹರಿಸಿದ. ಆಡಳಿತವನ್ನು ಬಿಗಿಗೊಳಿಸಿದ. ಫ್ರೆಂಚರ ಸಹಾಯ ಪಡೆಯಲು ಪ್ರಯತ್ನಿಸಿದ. ಇದು ಸಾಧ್ಯವಾಗಲಿಲ್ಲ. ನೆಪೋಲಿಯನ್ ಫ್ರಾನ್ಸ್ ದೇಶದ ಚಕ್ರವರ್ತಿ. ಅವನು ಟಿಪ್ಪೂಗೆ ಸಹಾಯ ಮಾಡುವ ಭರವಸೆ ನೀಡಿದ. ನೆಪೋಲಿಯನ್ ಸೈನ್ಯದೊಡನೆ ಸಿರಿಯಾ ದೇಶದವರೆಗೂ ಬಂದ. ಸಿರಿಯಾದಲ್ಲಿ ನೆಪೋಲಿಯನ್ ಸೋತು ಹಿಮ್ಮೆಟ್ಟಿದ. ಇದು ಟಿಪ್ಪೂಗಾದ ಅಪಾರ ನಷ್ಟ. ಟಿಪ್ಪೂ ಆಫ್ಘನರಿಂದಲೂ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿ ತಂತ್ರ ಹೂಡಿ ಇದನ್ನು ತಪ್ಪಿಸಿದನು. ಬ್ರಿಟಿಷರನ್ನು ಹೊರಗಟ್ಟುವುದು ಟಿಪ್ಪೂವಿನ ಗುರಿಯಾಗಿತ್ತು. ಬ್ರಿಟಿಷರು ಟಿಪ್ಪೂವಿನ ಚಟುವಟಿಕೆಗಳನ್ನು ಗಮನಿಸುತ್ತಲೇ ಇದ್ದರು. ಬ್ರಿಟಿಷರಿಗೆ ಟಿಪ್ಪೂ ಮತ್ತೆ ಪ್ರಬಲನಾಗುವುದು ಬೇಕಿರಲಿಲ್ಲ. ಮತ್ತೊಂದು ಯುದ್ಧದ ಅವಕಾಶಕ್ಕಾಗಿ ಅವರು ಕಾಯುತ್ತಿದ್ದರು.


ಲಾರ್ಡ್ ವೆಲ್ಲೆಸ್ಲಿ

ಆಗ ವೆಲ್ಲೆಸ್ಲಿ ಗೌರ್ನರ್ ಜನರಲ್ಲನಾಗಿ ಬಂದಿದ್ದ. ಅವನೊಬ್ಬ ಮಹತ್ವಾಕಾಂಕ್ಷಿ. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಿಸುವ ಬಯಕೆ ಅವನದು. ಅವನು ಇಲ್ಲಿ ಬ್ರಿಟಿಷರ ಸ್ಥಿತಿಯನ್ನು ಅಭ್ಯಾಸ ಮಾಡಿದನು. ಬಂಗಾಳ ಮತ್ತು ಬೊಂಬಾಯಿ ಬ್ರಿಟಿಷರ ಹಿಡಿತದಲ್ಲಿದ್ದವು. ಕೊಡಗಿನ ರಾಜ, ತಿರುವಾಂಕೂರಿನ ರಾಜ, ಔಧ್‌ನ ನವಾಬ ಬ್ರಿಟಿಷರ ಸಾಮಂತರಾಗಿದ್ದರು. ನಾನಾ ಫಡ್ನವೀಸನು ಮರಣಹೊಂದಿದ್ದ. ನಿಜಾಮನೂ ಸುಸ್ತಾಗಿದ್ದ. ನಿಜವಾದ ಅಡ್ಡಿಯಿದ್ದುದು ಟಿಪ್ಪೂವಿನಿಂದ. ಟಿಪ್ಪೂ ಈಗಾಗಲೇ ಪರಿಹಾರದ ಹಣವನ್ನು ಕೊಟ್ಟಿದ್ದ. ಸೈನ್ಯವನ್ನು ಮತ್ತೆ ಸಜ್ಜುಗೊಳಿಸಿದ್ದ. ಕೋಟೆಯನ್ನು ಭದ್ರಪಡಿಸಿಕೊಂಡಿದ್ದ.

ಸಹಾಯಕ ಸೈನ್ಯ ಪದ್ಧತಿ

ಹಿಂದೆ ಮರಾಠರು, ನಿಜಾಮ ಮತ್ತು ಬ್ರಿಟಿಷರ ಮಧ್ಯ ಒಪ್ಪಂದ ನಡೆದಿತ್ತು. ಇದು ನಮಗೆ ತಿಳಿದಿದೆ. ವೆಲ್ಲೆಸ್ಲಿ ಈ ಒಪ್ಪಂದಕ್ಕೆ ಜೀವ ತುಂಬಿದ. ನಿಜಾಮನ ಸೇನೆಯಲ್ಲಿದ್ದ ಪರದೇಶಿಯರನ್ನು ನಿವಾರಿಸಿದ. ನಿಜಾಮ ವರ್ಷಕ್ಕೆ ಹದಿನಾಲ್ಕು ಲಕ್ಷ ರೂಪಾಯಿ ಕೊಡುವುದು. ಇದಕ್ಕೆ ಪ್ರತಿಯಾಗಿ ಬ್ರಿಟಿಷರ ಸೈನ್ಯವೊಂದು ಅಲ್ಲಿ ನೆಲೆಗೊಳ್ಳುವುದು. ಇದನ್ನೇ ಸಹಾಯಕ ಸೈನ್ಯ ಪದ್ಧತಿ ಎನ್ನುತ್ತಾರೆ. ಮರಾಠರು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಪೇಷ್ವೆ ಎರಡನೆಯ ಬಾಜಿರಾಯ ಬ್ರಿಟಿಷರ ಜೊತೆ ಸೇರಲು ಒಪ್ಪಿದ. ಇಪ್ಪತ್ತೈದು ಸಾವಿರ ಸೈನಿಕರನ್ನು ಕಳುಹಿಸಲೂ ಒಪ್ಪಿಕೊಂಡ. ಈ ಸಮಯದಲ್ಲಿ ಒಂದು ಘಟನೆ ನಡೆಯಿತು. ನೆಪೋಲಿಯನ್ ಪೂರ್ವಕ್ಕೆ ಬರುತ್ತಿದ್ದಾನೆ. ಅವನು ಭಾರತಕ್ಕೇ ಬರುತ್ತಿರಬೇಕು ಎಂದು ಪತ್ರಿಕೆಯೊಂದು ವರದಿ ಮಾಡಿತು. ವೆಲ್ಲೆಸ್ಲಿಯು ಇದರಿಂದ ಆತಂಕಗೊಂಡ. ಟಿಪ್ಪೂವಿನ ಮೇಲೆ ಯುದ್ಧ ಘೋಷಿಸಲು ತೀರ್ಮಾನಿಸಿದ. ಅವನು ಮದ್ರಾಸ್ ಸರ್ಕಾರಕ್ಕೆ ಪತ್ರ ಬರೆದ. ಟಿಪ್ಪೂವಿನ ವಿರುದ್ಧ ಸೈನ್ಯ ಕಳುಹಿಸಬೇಕೆಂದು ತಿಳಿಸಿದನು. ಮದ್ರಾಸ್ ಸೈನ್ಯ ಕಡಿಮೆ ಸಂಖ್ಯೆಯಲ್ಲಿತ್ತು. ಅದು ತನ್ನನ್ನೇ ರಕ್ಷಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

ನೈಲ್ ಯುದ್ಧದಲ್ಲಿ ಫ್ರೆಂಚ್ ಸೈನ್ಯ ನಿರ್ನಾಮವಾಗಿತ್ತು. ಭಾರತಕ್ಕೆ ಫ್ರೆಂಚರ ಹೆದರಿಕೆಯಿರಲಿಲ್ಲ. ಯುದ್ಧ ಘೋಷಿಸಲು ನಿಜವಾಗಿ ಕಾರಣವೇ ಇರಲಿಲ್ಲ. ಆದರೆ ವೆಲ್ಲೆಸ್ಲಿ



೧೭೯೯ ರಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪೂವಿನ ಮರಣ

ಯುದ್ಧಕ್ಕಾಗಿ ತಹತಹಿಸುತ್ತಿದ್ದ. ಟಿಪ್ಪೂವಿನ ಮೇಲೆ ಪಿತೂರಿಯ ಅಪವಾದ ಹೊರಿಸಿದ. ಯುದ್ಧ ಘೋಷಿಸಿಯೇ ಬಿಟ್ಟ. ಟಿಪ್ಪೂಗೆ ಯುದ್ಧ ಬೇಕಿರಲಿಲ್ಲ. ನಿಜಕ್ಕೂ ಅವನಿಗೆ ಶಾಂತಿ ಬೇಕಿತ್ತು. ಆದರೆ ಟಿಪ್ಪೂವಿನ ಬೇಕು ಬೇಡಗಳನ್ನು ಕೇಳುವವರಾರು? ಬೊಂಬಾಯಿಯಲ್ಲಿ, ಮದ್ರಾಸ್‌ನಲ್ಲಿ ಮತ್ತು ಹೈದರಾಬಾದ್‌ನಲ್ಲಿ ಬ್ರಿಟಿಷ್ ಸೈನ್ಯಗಳಿದ್ದವು. ಈ ಸೈನ್ಯಗಳು ಶ್ರೀರಂಗಪಟ್ಟಣದತ್ತ ಹೊರಟವು. ಮರಾಠರ ಸೈನ್ಯ ಮತ್ತು ನಿಜಾಮನ ಸೈನ್ಯಗಳೂ ಸೇರಿಕೊಂಡವು.

ನಾಲ್ಕನೆಯ ಮೈಸೂರು ಯುದ್ಧ ಮತ್ತು ಟಿಪ್ಪೂವಿನ ಮರಣ

ಬೊಂಬಾಯಿ ಸೈನ್ಯವನ್ನು ಟಿಪ್ಪೂ ಪೆರಿಯಾ ಪಟ್ಟಣದ ಬಳಿ ಎದುರಿಸಿದ. ಈ ಯುದ್ಧದಲ್ಲಿ ಅವನಿಗೆ ಸೋಲು ಉಂಟಾಯಿತು. ಮದ್ರಾಸ್ ಸೈನ್ಯ ಮುಂದುವರಿಯಿತು. ಒಂದರ ನಂತರ ಒಂದರಂತೆ ಕೋಟೆಗಳನ್ನು ವಶಪಡಿಸಿಕೊಂಡಿತು. ಮೈಸೂರು ರಾಜ್ಯಕ್ಕೆ ಹಲವಾರು ಸಾಮಂತ ರಾಜರಿದ್ದರು. ಅವರು ಶತ್ರುಗಳ ಕಡೆ ಸೇರಿದರು. ಟಿಪ್ಪೂವಿನಲ್ಲಿ ಹೋರಾಟದ ಉತ್ಸಾಹ ಕುಂದಿತ್ತು. ಮಳವಳ್ಳಿಯನ್ನು ಆಕ್ರಮಿಸಿಕೊಂಡು ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣವನ್ನು ಮುತ್ತಿತು. ಟಿಪ್ಪೂವಿನ ಫಿರಂಗಿ ಏಟುಗಳು ಬಲವಾಗಿದ್ದವು. ಶತ್ರು ಸೈನಿಕರಿಗೆ ಸಾಕಷ್ಟು ನಷ್ಟವುಂಟಾಯಿತು. ಆದರೆ ಶತ್ರು ಸೈನ್ಯ ಅಪಾರವಾಗಿತ್ತು. ಟಿಪ್ಪೂ ಗೆಲ್ಲುವುದು ಸಾಧ್ಯವಿರಲಿಲ್ಲ. ಅವನು ಸಂಧಾನದ ಪ್ರಯತ್ನ ನಡೆಸಿದ. ಟಿಪ್ಪೂ ಅರ್ಧ ರಾಜ್ಯ ಬಿಟ್ಟು ಕೊಡಬೇಕು, ಎರಡು ಕೋಟಿ ರೂಪಾಯಿ ಪರಿಹಾರ ಕೊಡಬೇಕು, ನಾಲ್ಕು ಜನ ಮಕ್ಕಳು ಸೇರಿದಂತೆ ಒಟ್ಟು ಎಂಟು ಜನರನ್ನು ಒತ್ತೆಯಿರಿಸಬೇಕು ಎಂದು ಬ್ರಿಟಿಷರು ಷರತ್ತು ವಿಧಿಸಿದರು. ಇದು ಅವಮಾನಕರ ಷರತ್ತು.

ಇದರಿಂದ ಟಿಪ್ಪೂಗೆ ಆಘಾತವಾಯ್ತು. ಆತ ಹೋರಾಡಲು ನಿರ್ಧರಿಸಿದ. ಶತ್ರು ಸೇನೆ ಕೋಟೆಗೆ ಲಗ್ಗೆ ಹಾಕಿತು. ಎರಡೂ ಕಡೆ ವಿಪರೀತ ಸಾವು ನೋವು ಉಂಟಾಯಿತು. ಸಾವಿರದ ಏಳುನೂರಾ ತೊಂಬತ್ತೊಂಬತ್ತನೆಯ ಇಸವಿ ಮೇ ನಾಲ್ಕನೇ ತಾರೀಖು. ಮಧ್ಯಾಹ್ನ ಒಂದು ಗಂಟೆಯಲ್ಲಿ ಟಿಪ್ಪೂ ಊಟಕ್ಕೆ ಕುಳಿತಿದ್ದ. ಶತ್ರು ಸೈನ್ಯ ಕೋಟೆಯೊಳಗೆ ನುಗ್ಗಿದ ಸುದ್ದಿ ಬಂತು. ಆತ ಊಟವನ್ನು ಬಿಟ್ಟು ಎದ್ದ. ರಣರಂಗಕ್ಕೆ ಧಾವಿಸಿದ. ವೀರಾವೇಶದಿಂದ ಹೋರಾಡಿದ. ಶತ್ರು ಸೈನ್ಯ ಅಪಾರವಾಗಿತ್ತು. ಸೈನಿಕನೊಬ್ಬನ ಗುಂಡಿಗೆ ಟಿಪ್ಪೂ ಬಲಿಯಾದ.

ಆತನ ಪ್ರಾಣಪಕ್ಷಿ ಹಾರಿತ್ತು. ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಅಧ್ಯಾಯವೊಂದು ಮುಗಿಯಿತು.

ಅಂದು ಸಂಜೆಯ ವೇಳೆಗೆ ಬಂದೂಕಿನ ಸದ್ದು ಅಡಗಿತು. ಕತ್ತಿಗಳ ಖಣಖಣ ಸದ್ದು ನಿಂತಿತು. ಸ್ಮಶಾನ ಮೌನ ನೆಲೆಸಿತ್ತು. ಟಿಪ್ಪೂವಿನ ಮೃತದೇಹಕ್ಕಾಗಿ ಹುಡುಕಾಟ ನಡೆಯಿತು. ಹೆಣಗಳ ರಾಶಿಯ ಮಧ್ಯೆ ಟಿಪ್ಪೂವಿನ ಮೃತದೇಹ ದೊರೆಯಿತು. ದೇಹವನ್ನು ಅರಮನೆಗೆ ತರಲಾಯಿತು.. ಟಿಪ್ಪೂವಿನ ಮೃತದೇಹವನ್ನು ಆತನ ತಂದೆಯ ಸಮಾಧಿಯ ಪಕ್ಕದಲ್ಲಿ ಹೂಳಲಾಯಿತು.

ಟಿಪ್ಪೂಸುಲ್ತಾನನ ಪತನದ ಪರಿಣಾಮ

ಟಿಪ್ಪೂವಿನ ಪತನವಾಯಿತು. ಗೆದ್ದ ಪ್ರದೇಶವನ್ನು ಮರಾಠರು ಮತ್ತು ಬ್ರಿಟಿಷರು ಹಂಚಿಕೊಂಡರು. ಗೂಟಿ, ಗುರ್ರಮ್‌ಖಂಡ, ಚಿರಾಲ್ ದುರ್ಗಗಳು ನಿಜಾಮನಿಗೆ ದೊರಕಿದವು. ಕಾರವಾರದಿಂದ ಮಂಗಳೂರಿನವರೆಗಿನ ಕರಾವಳಿ ಬ್ರಿಟಿಷರ ಪಾಲಾಯಿತು. ಕೊಯಮತ್ತೂರು, ಧರ್ಮಪುರಂ, ವೈನಾಡು ಮತ್ತು ಶ್ರೀರಂಗಪಟ್ಟಣಗಳೂ ಬ್ರಿಟಿಷರಿಗೆ ದೊರೆತವು. ಹರಪನಹಳ್ಳಿ, ಆನೆಗುಡ್ಡಗಳನ್ನು ಮರಾಠರಿಗೆ ಕೊಡಲು ನಿರ್ಧರಿಸಿದರು. ಆದರೆ ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಿಕೊಳ್ಳಬೇಕು ಎಂಬ ಷರತ್ತನ್ನೂ ವಿಧಿಸಿದರು. ಆದ್ದರಿಂದ ಮರಾಠರು ಇದನ್ನು ತಿರಸ್ಕರಿಸಿದರು. ಮೈಸೂರನ್ನು ಒಂದು ಆಶ್ರಿತ ಸಂಸ್ಥಾನ ಮಾಡಲಾಯಿತು. ಮೈಸೂರಿನ ರಾಜಮನೆತನವನ್ನು ಅಧಿಕಾರಕ್ಕೆ ತಂದರು. ಇದರಿಂದ ಬ್ರಿಟಿಷರಿಗೆ ಬರಬಹುದಾಗಿದ್ದ ಅಪವಾದ ತಪ್ಪಿತು. ರಾಜ್ಯವನ್ನು ಕಬಳಿಸಿದರು ಎಂಬ ಅಪವಾದ ಅವರಿಗೆ ಬರಲಿಲ್ಲ. ಹತ್ತು ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರಿನ ಅರಸನಾದ. ವೆಲ್ಲೆಸ್ಲಿಗೆ ಬ್ರಿಟಿಷ್ ಸರ್ಕಾರ ಭಾರೀ ಬಿರುದು ನೀಡಿ ಸನ್ಮಾನ ಮಾಡಿತು.

ಟಿಪ್ಪೂ ಮಡಿದದ್ದರಿಂದ ಮೈಸೂರು ರಾಜ್ಯದ ಮೇಲೆ ಬ್ರಿಟಿಷರ ಹತೋಟಿ ಹೆಚ್ಚಿತು. ಒಂದು ಕಾಲಕ್ಕೆ ಮೈಸೂರು ರಾಜ್ಯವು ವಿಶಾಲವಾಗಿತ್ತು. ಕಾವೇರಿಯಿಂದ ಗೋದಾವರಿಯವರೆಗೂ ಹರಡಿಕೊಂಡಿತ್ತು. ತನ್ನದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡಿತ್ತು. ಈಗ ಮೈಸೂರು ರಾಜ್ಯವು ಹರಿದು ಹಂಚಿ ಹೋಯಿತು. ಭಾರತದ ಬೇರೆ ಯಾವುದೇ

ರಾಜ್ಯ ಇಷ್ಟರಮಟ್ಟಿಗೆ ಛಿದ್ರ ಛಿದ್ರವಾಗಲಿಲ್ಲ. ಬ್ರಿಟಿಷರು ಮಾಡಿದ ಈ ಆಘಾತದಿಂದ ಕರ್ನಾಟಕವು ಇಂದಿಗೂ ಚೇತರಿಸಿಕೊಂಡಿಲ್ಲ.

ಟಿಪ್ಪೂವಿನ ವ್ಯಕ್ತಿತ್ವ

ಹೈದರ್ ಆಲಿಯು ಎಂದೂ ತನ್ನನ್ನು ಸುಲ್ತಾನನೆಂದು ಕರೆದುಕೊಳ್ಳುತ್ತಿರಲಿಲ್ಲ. ಹೈದರ್ ತನ್ನನ್ನು ಪ್ರಧಾನ ಮಂತ್ರಿ ಸೇನಾಧಿಪತಿ ಎಂದು ಕರೆದುಕೊಳ್ಳುತ್ತಿದ್ದ. ಆದರೆ ಟಿಪ್ಪೂವಿನ ನಂಬಿಕೆ ಬೇರೆ. "ಖುದಾದಾದ್ ಸರ್ಕಾರ್" ಎಂದು ಟಿಪ್ಪೂ ಹೇಳುತ್ತಿದ್ದ. ಸರ್ಕಾರವು ದೇವರಿಂದ ಬಂದುದು ಎಂಬುದು ಇದರ ಅರ್ಥ. ತಾನೇ ಬಾದಷಹ ಎಂದು ಟಿಪ್ಪೂ ಹೇಳಿಕೊಂಡ. ಟಿಪ್ಪೂ ಎಂದರೆ ಹುಲಿ ಎಂಬ ಭಾವನೆ ಇಂದಿಗೂ ಇದೆ. ಹುಲಿ ಟಿಪ್ಪೂವಿನ ಲಾಂಛನ. ಹುಲಿಯ ಪಟ್ಟೆಗಳು ಅವನಿಗೆ ಪ್ರಿಯವಾದ ವಿನ್ಯಾಸ. ಟಿಪ್ಪೂವಿನ ಸಿಂಹಾಸನಕ್ಕೆ ಹುಲಿಯ ತಲೆಗಳ ಅಲಂಕಾರವಿದೆ. ಆತನ ಸೈನಿಕರ ಸಮವಸ್ತ್ರಕ್ಕೂ ಹುಲಿಪಟ್ಟೆಯ ವಿನ್ಯಾಸವಿತ್ತು. ಬಂದೂಕುಗಳ ಮೇಲೆ, ಕತ್ತಿಗಳ ಹಿಡಿಯ ಮೇಲೆ ಹುಲಿಯ ತಲೆಯ ಗುರುತುಗಳಿದ್ದವು. ಭಾರತದ ಇತಿಹಾಸದಲ್ಲಿ ಟಿಪ್ಪೂವಿಗೆ ಮಹತ್ವದ ಸ್ಥಾನವಿದೆ."ನೂರು ವರ್ಷ ಕುರಿಯಂತೆ ಬದುಕುವುದಕ್ಕಿಂತ ಒಂದು ವರ್ಷ ಹುಲಿಯಂತೆ ಬದುಕಿದರೆ ಸಾಕು" ಎಂಬುದು ಟಿಪ್ಪೂವಿನ ನಂಬಿಕೆ. ಬ್ರಿಟಿಷರನ್ನು ಭಾರತದಿಂದ ಓಡಿಸುವುದೇ ಟಿಪ್ಪೂವಿನ ಧ್ಯೇಯ. ಅದಕ್ಕಾಗಿ ಟಿಪ್ಪೂ ತನ್ನ ರಾಜ್ಯ, ಸಂಪತ್ತು ಮತ್ತು ತನ್ನ ಜೀವವನ್ನೇ ಪಣವಾಗಿಟ್ಟ. ಟಿಪ್ಪೂ ಒಬ್ಬ ಪ್ರತಿಭಾವಂತ. ಅವನು ಅಪಾರ ಜ್ಞಾನ ಹೊಂದಿದ್ದ. ಅವನದು ತುಂಬಾ ಚುರುಕು ಬುದ್ಧಿ.

ಆಡಳಿತ

ಟಿಪ್ಪೂವಿನ ಕಾಲದಲ್ಲಿ ತುಂಬ ಅಚ್ಚುಕಟ್ಟಾದ ಆಡಳಿತ ವ್ಯವಸ್ಥೆಯಿತ್ತು. ಅದೊಂದು ಕೇಂದ್ರಿಕೃತ ಆಡಳಿತ ವ್ಯವಸ್ಥೆ. ಟಿಪ್ಪೂವಿಗೆ ಫ್ರಾನ್ಸ್ ಮುಂತಾದ ದೇಶಗಳ ಜೊತೆ ಸಂಪರ್ಕವಿತ್ತು. ವಿದೇಶಗಳ ಆಡಳಿತ ಪದ್ಧತಿಗಳು ಅವನಿಗೆ ತಿಳಿದಿದ್ದವು. ಅವುಗಳಲ್ಲಿಯ ಒಳ್ಳೆಯ ಅಂಶಗಳನ್ನು ಟಿಪ್ಪೂ ಆಡಳಿತದಲ್ಲಿ ಅಳವಡಿಸಿದ್ದನು. ದಕ್ಷರನ್ನು, ಪ್ರಾಮಾಣಿಕರನ್ನು, ವಿದ್ಯಾವಂತರನ್ನು ಟಿಪ್ಪೂ ಅಧಿಕಾರಿಗಳನ್ನಾಗಿ ಮಾಡುತ್ತಿದ್ದ. ಆತನ ಸರ್ಕಾರದಲ್ಲಿ ಹಲವಾರು ಇಲಾಖೆಗಳಿದ್ದವು.

ಒಂದೊಂದು ಇಲಾಖೆಗೂ ಒಬ್ಬ ಮುಖ್ಯಸ್ಥ ಇರುತ್ತಿದ್ದನು. ಇವರ ಅಧಿಕಾರ, ಜವಾಬ್ದಾರಿ ಏನು ಎಂಬುದು ಖಚಿತವಾಗಿ ತಿಳಿದಿರುತ್ತಿತ್ತು. ಒಂದೊಂದು ಇಲಾಖೆಯಲ್ಲೂ ಒಂದೊಂದು ಮಂಡಳಿ ಇರುತ್ತಿತ್ತು. ಇಲಾಖೆಯ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿತ್ತು. ಚರ್ಚಿಸಿದ ವಿಷಯಗಳನ್ನು ಬರೆದಿಡಲಾಗುತ್ತಿತ್ತು. ಬಹುಮತದ ಆಧಾರದ ಮೇಲೆ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ಕೊತ್ವಾಲನು ಪೋಲೀಸು ಇಲಾಖೆಯ ಮುಖ್ಯಸ್ಥನಾಗಿರುತ್ತಿದ್ದನು. ಖಾಜಿಯು ಮುಖ್ಯ ನ್ಯಾಯಾಧೀಶ. ರಾಜ್ಯವನ್ನು ಏಳು ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಮುಂದೆ ಇದನ್ನು ಮೂವತ್ತೇಳಕ್ಕೆ ಹೆಚ್ಚಿಸಲಾಯಿತು.

ಸುಧಾರಣೆಗಳು

ಟಿಪ್ಪೂ ಆಡಳಿತದಲ್ಲಿ ಹಲವಾರು ಸುಧಾರಣೆಗಳನ್ನು ತಂದನು. ಅವನು ಜಹಗೀರುಗಳನ್ನು ರದ್ದು ಪಡಿಸಿದನು. ಅದಕ್ಕೆ ಬದಲಾಗಿ ಸಂಬಳವನ್ನು ನಿಗದಿ ಮಾಡಿದನು. ಇದೊಂದು ಬಹಳ ಒಳ್ಳೆಯ ಕ್ರಮ. ಇದರಿಂದ ಜಹಗೀರುದಾರರು ಜನರನ್ನು ಶೋಷಿಸುವುದು ತಪ್ಪಿತು. ಟಿಪ್ಪೂ ಕಂದಾಯ ವ್ಯವಸ್ಥೆಯನ್ನು ಸರಿಪಡಿಸಿದನು. ಮುಂಚಿನ ಕಂದಾಯ ವ್ಯವಸ್ಥೆ ಹೀಗಿರುತ್ತಿತ್ತು. ಹಳ್ಳಿಯ ಮುಖ್ಯಸ್ಥ ನಿಗದಿಯಾದ ಕಂದಾಯವನ್ನು ಬೊಕ್ಕಸಕ್ಕೆ ಕೊಟ್ಟು ಬಿಡುವುದು. ನಂತರ ತಾನೇ ಹಳ್ಳಿಗರಿಂದ ಕಂದಾಯ ವಸೂಲಿ ಮಾಡಿಕೊಳ್ಳುವುದು. ಇದರಿಂದಾಗಿ ಈ ಮುಖ್ಯಸ್ಥರು ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದ್ದರು. ಮನಸ್ಸಿಗೆ ಬಂದಷ್ಟು ವಸೂಲು ಮಾಡುತ್ತಿದ್ದರು. ಜನರನ್ನು ಹಿಂಸಿಸುತ್ತಿದ್ದರು. ಟಿಪ್ಪೂ ಇದನ್ನು ತಪ್ಪಿಸಿದನು. ಕಂದಾಯ ನಿಗದಿ ಮಾಡಿಸಿ ರೈತರಿಂದ ನೇರವಾಗಿ ಕಂದಾಯ ವಸೂಲು ಮಾಡಿಸಿದನು. ಇದರಿಂದ ಮಧ್ಯವರ್ತಿಗಳು ತಪ್ಪಿದರು. ಜನರಿಗೆ ಸರ್ಕಾರದ ಮೇಲೆ ನಂಬಿಕೆ ಬಂದಿತು.

ಆರ್ಥಿಕ ಪ್ರಗತಿ

ದೇಶದ ಆರ್ಥಿಕ ಪ್ರಗತಿಗೆ ಟಿಪ್ಪೂ ಹಲವು ಕ್ರಮಗಳನ್ನು ಕೈಗೊಂಡ. ಅಡಿಕೆ, ಎಲೆ, ಮೆಣಸು, ಏಲಕ್ಕಿ, ಸಾಂಬಾರ ಪದಾರ್ಥಗಳನ್ನು ಬೆಳೆಸಲು ಪ್ರೋತ್ಸಾಹ ನೀಡಿದ. ಗಂಧದ ಎಣ್ಣೆಗೆ, ತೇಗದ ಮರಕ್ಕೆ ಆಗ ತುಂಬ ಬೇಡಿಕೆಯಿತ್ತು. ಈ ಮರಗಳನ್ನು ಬೆಳೆಸಲು ಕ್ರಮ ಕೈಗೊಂಡ. ಕೃಷಿ ಪಶುಪಾಲನೆಗೆ ಉತ್ತೇಜನ ನೀಡಿದ. 'ಅಮೃತಮಹಲ್' ಎಂಬ ತಳಿಯನ್ನು ಟಿಪ್ಪೂನ ಕಾಲದಲ್ಲಿ ಅಭಿವೃದ್ಧಿ ಪಡಿಸಲಾಯಿತು. ಅದು ಇಂದಿಗೂ ತುಂಬ

ಖ್ಯಾತಿ ಪಡೆದಿದೆ. ಮೈಸೂರಿನ ರೇಷ್ಮೆಗೆ. ದಂತದ ಕೆತ್ತನೆಗಳಿಗೆ, ವಿದೇಶಗಳಲ್ಲಿ ಬೇಡಿಕೆಯಿತ್ತು. ಟಿಪ್ಪೂ ಇವುಗಳ ತಯಾರಿಕೆಯನ್ನು ಉತ್ತೇಜಿಸಿದ. ಫ್ರಾನ್ಸ್, ಜರ್ಮನಿ, ಟರ್ಕಿ, ಚೀನಾ ಮುಂತಾದ ದೇಶಗಳಿಂದ ತಂತ್ರಜ್ಞರನ್ನು ಟಿಪ್ಪೂ ಕರೆಸಿದ. ರಾಜ್ಯದಲ್ಲಿ, ಕಬ್ಬಿಣ, ಕಾಗದ, ಗಾಜು. ಯುದ್ಧದ ಉಪಕರಣಗಳ ತಯಾರಿಕೆ ಪ್ರಾರಂಭಿಸಿದ. ವೀಣೆಗೆ ಬೇಕಾದ ತಂತಿಯು ಚನ್ನಪಟ್ಟಣದಲ್ಲಿ ತಯಾರಾಗುತ್ತಿತ್ತು. ರೇಷ್ಮೆ ಕೈಗಾರಿಕೆ ಟಿಪ್ಪೂವಿನ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಹಿಪ್ಪುನೇರಳೆ ಬೆಳೆಯನ್ನು ಟಿಪ್ಪೂ ಪ್ರೋತ್ಸಾಹಿಸಿದ.

ಟಿಪ್ಪೂ ಸುಲ್ತಾನ್ ಮತ್ತು ಹಿಂದೂ ಧರ್ಮ

ಟಿಪ್ಪೂ ಒಬ್ಬ ಸುನ್ನಿ ಮುಸ್ಲಿಮನಾಗಿದ್ದ. ಅವನಿಗೆ ಹಿಂದೂ ಧರ್ಮದ ಬಗ್ಗೆ ಅಪಾರ ಗೌರವವಿತ್ತು. ಹಲವಾರು ಹಿಂದೂ ದೇವಾಲಯಗಳಿಗೆ ಅವನು ಕಾಣಿಕೆಗಳನ್ನು ಸಲ್ಲಿಸಿದ್ದಾನೆ. ಶ್ರೀರಂಗನಾಥ, ನರಸಿಂಹ ಮತ್ತು ಗಂಗಾಧರೇಶ್ವರ ದೇವಾಲಯಗಳು ಶ್ರೀರಂಗಪಟ್ಟಣದ ಕೋಟೆಯೊಳಗೇ ಇವೆ. ಸಹಸ್ರಾರು ಹಿಂದೂ ಭಕ್ತಾದಿಗಳು ಇಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಟಿಪ್ಪೂ ಶೃಂಗೇರಿಯ ಶಾರದಾಂಬಾ ದೇವಾಲಯಕ್ಕೆ ಕಾಣಿಕೆಗಳನ್ನು ಸಲ್ಲಿಸಿದ್ದಾನೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ದಾನಗಳನ್ನು ನೀಡಿದ್ದಾನೆ. ಶ್ರೀರಂಗನಾಥ ದೇವಾಲಯಕ್ಕೂ ಕಾಣಿಕೆಗಳನ್ನು ನೀಡಿದ್ದಾನೆ. ಕಾಂಜೀವರಂನಲ್ಲಿ ದೇವಾಲಯವೊಂದರ ನಿರ್ಮಾಣಕ್ಕೆ ಹತ್ತುಸಾವಿರ ಹಣ ನೀಡಿದ್ದಾನೆ. ಶೃಂಗೇರಿಯ ಸ್ವಾಮಿಗಳಿಗೆ ಟಿಪ್ಪೂ ಬರೆದಿರುವ ಈ ಪತ್ರವನ್ನು ನೋಡಿ

"ನಗುತ್ತಾ ಮಾಡಿದ ಪಾಪದ ಫಲವನ್ನು ಜನರು ಅಳುತ್ತಾ ಅನುಭವಿಸುತ್ತಾರೆ - ಎಂಬ ಉಕ್ತಿಯಂತೆ ಶೃಂಗೇರಿಯಂಥ ಪವಿತ್ರ ಕ್ಷೇತ್ರದ ಬಗ್ಗೆ ಪಾಪವನ್ನೆಸಗಿದ ಜನರು ತಮ್ಮ ಅಕೃತ್ಯಕ್ಕೆ ಕಲಿಯುಗದಲ್ಲಿ ಶೀಘ್ರವಾಗಿ ತಕ್ಕ ಫಲವನ್ನು ಅನುಭವಿಸುತ್ತಾರೆ. ಗುರುದ್ರೋಹವು ನಿಜವಾಗಿ ಅಧಃ ಪತನದ ಮೂಲಕ ಸರ್ವನಾಶದಲ್ಲಿ ಪರ್ಯಾವಸಾನಗೊಳ್ಳುತ್ತದೆ. ನಗರದ ಅಸಫನಿಗೆ ಆಜ್ಞಾಪಿಸಿರುವಂತೆ ಅವನು ಒಪ್ಪಿಸುವ ಇನ್ನೂರು ರಹತಿ ಬೆಲೆಯ ಧಾನ್ಯವನ್ನೂ ಶಾರದಾ ದೇವಿಗೆ ಅರ್ಪಿಸಿ, ನಮ್ಮ ದಿಗ್ವಿಜಯಕ್ಕೂ ಶತ್ರುಗಳ ವಿನಾಶಕ್ಕೂ ಪ್ರಾರ್ಥಿಸುವುದು."

ಮತ್ತೊಂದು ಪತ್ರದಲ್ಲಿ ಟಿಪ್ಪೂ ಈ ರೀತಿ ಬರೆದಿದ್ದಾನೆ :

"ನೀವು ಜಗದ್ಗುರುಗಳು, ಲೋಕೋದ್ಧಾರಕ್ಕೂ, ಮಾನವ ಕಲ್ಯಾಣಕ್ಕೂ ಯಾವಾಗಲೂ ತಪಸ್ಸನ್ನು ಆಚರಿಸುತ್ತಿದ್ದೀರಿ. ನಮ್ಮ ಏಳಿಗೆ ಮತ್ತು ಅಭಿವೃದ್ಧಿಗಾಗಿ ಪ್ರಾರ್ಥಿಸಿ. ನಿಮ್ಮಂತಹ ಪವಿತ್ರ ಜೀವಿಗಳು ಯಾವ ನಾಡಿನಲ್ಲೇ ವಾಸಿಸುತ್ತಿರಲಿ. ಆ ನಾಡು ಒಳ್ಳೆಯ ಮಳೆ ಬೆಳೆಗಳಿಂದ ವರ್ಧಿಸುತ್ತದೆ."

ಟಿಪ್ಪೂ ಮತ್ತು ಕ್ರಿಶ್ಚಿಯನ್ ಧರ್ಮ

ಧರ್ಮಪ್ರಚಾರಕ್ಕಾಗಿ ಟಿಪ್ಪೂ ಎಂದೂ ಯುದ್ಧ ಮಾಡಿಲ್ಲ. ರಾಜ್ಯ ವಿಸ್ತರಣೆಗಾಗಿ ಅವನು ಯುದ್ಧಗಳನ್ನು ಮಾಡಿದ್ದಾನೆ. ರಾಜ್ಯವಿಸ್ತರಣೆ ಅಂದಿನ ಕಾಲದಲ್ಲಿ ರಾಜನ ಕರ್ತವ್ಯವೇ ಆಗಿತ್ತು. ಮಂಗಳೂರು ಒಪ್ಪಂದದ ನಂತರ ಟಿಪ್ಪೂ ಸಹಸ್ರಾರು ಕ್ರಿಶ್ಚಿಯನ್ನರನ್ನು ಸೆರೆಹಿಡಿದನು. ಕೆಲವರನ್ನು ಗೋವಾಕ್ಕೆ ಗಡಿಪಾರು ಮಾಡಿದನು. ಕೆಲವರನ್ನು ಮತಾಂತರಗೊಳಿಸಿದನು. ಕೆಲವರನ್ನು ಸೆರೆಯಲ್ಲಿರಿಸಿದನು ಎಂಬುದಾಗಿ ಹೇಳಲಾಗುತ್ತದೆ. ಇವರು ಕರಾವಳಿಯಲ್ಲಿ ನೆಲೆಸಿದ್ದವರು. ಇಕ್ಕೇರಿ, ಬಿದನೂರಿನ ನಾಯಕರ ಕಾಲದಲ್ಲಿ ಸ್ವತಂತ್ರವಾಗಿ ಬದುಕಿದವರು. ಆಗ ಈ ಕ್ರಿಶ್ಚಿಯನ್ನರಿಗೆ ಗೋವಾದ ಜೊತೆಗೆ ತಲ್ಲಿಚೇರಿಯ ಇಂಗ್ಲೀಷರ ಜೊತೆಗೆ ಸಂಪರ್ಕವಿತ್ತು. ಇಂಗ್ಲೀಷರು ಕರಾವಳಿಯನ್ನು ಆಕ್ರಮಿಸಿಕೊಳ್ಳುವುದನ್ನು ಕ್ರಿಶ್ಚಿಯನ್ನರು ಸ್ವಾಗತಿಸಿದರಂತೆ. ಇದರಿಂದ ರೋಷಗೊಂಡ ಟಿಪ್ಪೂ ಇವರನ್ನು ದಮನ ಮಾಡಿದನು ಎನ್ನಲಾಗುತ್ತದೆ.

ತನ್ನ ವಿರುದ್ಧ ನಡೆದುಕೊಂಡವರಿಗೆ ಟಿಪ್ಪೂ ಕಠಿಣ ಶಿಕ್ಷೆಗಳನ್ನು ನೀಡುತ್ತಿದ್ದ. ಟಿಪ್ಪೂವಿನ ಕಾಲದಲ್ಲಿ ಮತಾಂತರವು ಒಂದು ಶಿಕ್ಷೆಯಾಗಿ ಬಳಕೆಯಾದಂತೆ ತೋರುತ್ತದೆ. ತನ್ನ ವಿರುದ್ಧ ಬಂಡೆದ್ದ ಕೊಡಗರನ್ನು ಟಿಪ್ಪೂ ಮತಾಂತರಗೊಳಿಸಿದ್ದಾನೆ. ಕೇರಳದ ನಾಯರ್‌ಗಳನ್ನೂ ಟಿಪ್ಪೂ ಮತಾಂತರಗೊಳಿಸಿದ್ದಾನೆ. ಟಿಪ್ಪೂವಿನ ಆಳ್ವಿಕೆಯಲ್ಲಿ ಮುಸ್ಲಿಮರಿಗೆ ಕೆಲವು ವಿಶೇಷ ಸವಲತ್ತುಗಳಿದ್ದವು ಎನ್ನಲಾಗುತ್ತದೆ. ಇದರಿಂದ ಆಕರ್ಷಿತವಾಗಿ ಕೆಲವರು ಮತಾಂತರಗೊಂಡಿರಬಹುದು. ಕೇರಳದಲ್ಲಿ ಕೆಲವರು ಕೆಳವರ್ಗದವರನ್ನು ಮೇಲ್ವರ್ಗದವರು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದರು. ಇದರಿಂದ ತಪ್ಪಿಸಿಕೊಳ್ಳಲು ಕೆಲವರು ತಾವೇ ಮತಾಂತರಗೊಂಡಿರುವುದು ಸಾಧ್ಯ. ಏನೇ ಇರಲಿ ಟಿಪ್ಪೂ ಬೇರೆ ಧರ್ಮಗಳ ಬಗ್ಗೆ ಉದಾರವಾಗಿ ನಡೆದುಕೊಂಡಿರುವುದಕ್ಕೆ ಪುರಾವೆಗಳುಂಟು.

ಸಾಹಿತ್ಯ

ಟಿಪ್ಪೂವಿನದು, ಹೈದರಾಲಿಯದು ಬಿಡುವಿಲ್ಲದ ಬದುಕು. ಅವರು ಸದಾ ಯುದ್ಧ ಅಥವಾ ರಾಜಕಾರಣದ ಚಟುವಟಿಕೆಯಲ್ಲಿ ತೊಡಗಬೇಕಿತ್ತು. ಆದರೂ ಸಾಹಿತ್ಯಕ್ಕೆ ಪ್ರೋತ್ಸಾಹ ಇತ್ತು. ಹೈದರ್, ಟಿಪ್ಪೂ ಇವರ ಆಸ್ಥಾನದಲ್ಲಿ ಸಾಹಿತಿಗಳು ಕಲಾಕಾರರು ಇದ್ದರು. ಸಾಹಿತ್ಯದ ಚಟುವಟಿಕೆಗಳು ನಡೆಯುತ್ತಿದ್ದವು. ಕನ್ನಡ, ಪರ್ಶಿಯನ್ ಟಿಪ್ಪೂವಿನ ಆಸ್ಥಾನ ಭಾಷೆಗಳಾಗಿದ್ದವು. ಇವುಗಳ ಜೊತೆ ದಖನಿ ಭಾಷೆಯೂ ಪ್ರಾಮುಖ್ಯತೆ ಪಡೆದಿತ್ತು. ಹೈದರ್ ಆಲಿಯು ವಿದ್ಯಾವಂತನಾಗಿರಲಿಲ್ಲ. ಆದರೂ ಅವನಿಗೆ ಹಲವು ಭಾಷೆಗಳು ತಿಳಿದಿದ್ದವು.

ಆದರೆ ಟಿಪ್ಪೂ ಒಬ್ಬ ವಿದ್ವಾಂಸನಾಗಿದ್ದನು. ಟಿಪ್ಪೂ ದಖನಿ ಭಾಷೆಯಲ್ಲಿ ಹಲವಾರು ಪತ್ರಗಳನ್ನು ಬರೆದಿದ್ದಾನೆ. ಟಿಪ್ಪೂವಿನ ಆಸ್ಥಾನರಲ್ಲಿ ಜಾಯ್ನುಲ್ ಅಬ್ದೀನ್ ಶಿಸ್ತುರಿ ಎಂಬ ವಿದ್ವಾಂಸನಿದ್ದನು. ಅವನು "ಫಸ್‌ಹುಲ್ ಮುಜಾಹಿದೀನ್" ಎಂಬ ಕೃತಿ ರಚಿಸಿದ್ದಾನೆ. ಇದನ್ನು ಟಿಪ್ಪೂವಿನ ಮೇಲ್ವಿಚಾರಣೆಯಲ್ಲಿ ರಚಿಸಲಾಯಿತು ಎಂದು ಹೇಳುತ್ತಾರೆ. ಈ ಪುಸ್ತಕದಲ್ಲಿ ಕೆಲವು ಪದ್ಯಗಳಿವೆ. ಇವುಗಳನ್ನು ದಖನಿಯಲ್ಲಿ 'ರಿಖ್ತಿ' ಎಂದು ಕರೆಯುತ್ತಾರೆ. ಇವನ್ನು ಕೆಲವು ಸಂದರ್ಭಗಳಲ್ಲಿ ಸೈನ್ಯದಲ್ಲಿ ಪಠಿಸಲಾಗುತ್ತಿತ್ತು. ಹುಸೇನ್ ಆಲಿ ಇಜ್ಮಾತ್ ಎಂಬುವನು ಪ್ರಸಿದ್ಧ ವಿದ್ವಾಂಸ. ಆತ ಟಿಪ್ಪೂವಿನ ಆಸ್ಥಾನ ಕವಿ. ಈತ "ಮುಫರಿಹುಲ್ ಕುಲೀಬ್" ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ಪರ್ಷಿಯನ್ ಮತ್ತು ದಖನಿ ಹಾಡುಗಳಿವೆ. ಈ ಹಾಡುಗಳನ್ನು ವಿವಿಧ ರಾಗಗಳಿಗೆ ಅಳವಡಿಸಲಾಗಿದೆ.

ಟಿಪ್ಪೂ ಸಂಗೀತದಲ್ಲಿ ಕೆಲವು ಸಂಶೋಧನೆಗಳನ್ನು ಮಾಡಿದ್ದಾನೆ. ಈ ಪುಸ್ತಕದಲ್ಲಿ ಅದನ್ನು ವಿವರಿಸಲಾಗಿದೆ. ಕಿರ್ಮಾನಿ ಎಂಬುವನು ಆ ಕಾಲದ ಪ್ರಸಿದ್ಧ ಇತಿಹಾಸಕಾರ. ಕಿರ್ಮಾನಿಯೂ ದಖನಿ ಭಾಷೆಯಲ್ಲಿ ಕಾವ್ಯ ಬರೆದಿದ್ದಾನೆ. 'ಹೈದರ್‌ನಾಮಾ' ಮತ್ತು 'ಬಹಾದೂರ್‌ನಾಮಾ' ಎಂಬ ಕೃತಿಗಳು ದಖನಿ ಭಾಷೆಯಲ್ಲಿವೆ. ಮಹಮದ್ ಸೈಯದ್ ಮೇಕ್ರಿ ಆಸಿ ಒಬ್ಬ ಪ್ರಸಿದ್ಧ ಕವಿಯಾಗಿದ್ದನು. ಇವನು ಮುಳಬಾಗಿಲಿನವನು. ಅಹಮದ್ ಖಾನ್ ಶಿರಾನಿಯು 'ಚಾರ್ ಕುರ್ಸಿ' ಎಂಬ ಗ್ರಂಥ ರಚಿಸಿದ್ದಾನೆ. ಇದು ಮತಧರ್ಮವನ್ನು ಕುರಿತ ಪುಸ್ತಕ. ಇದು ಇಂದಿಗೂ ಪ್ರಸಿದ್ಧ ಗ್ರಂಥವಾಗಿದೆ. ಪರಬ್ ಎಂಬ ಕವಿಯು 'ಫತೇನಾಮಾ' ಎಂಬ ಕಾವ್ಯ ಬರೆದಿದ್ದಾನೆ. ಇದು ವರ್ಣನೆಗಳು ತುಂಬಿರುವ ಕಾವ್ಯ. ಇದರಲ್ಲಿ

ಟಿಪ್ಪೂ ಮರಾಠರ ವಿರುದ್ಧ ಪ್ರದರ್ಶಿಸಿದ ಸಾಹಸಗಳ ವಿವರಣೆ ಇದೆ. ಟಿಪ್ಪೂ ಒಂದು ಉತ್ತಮ ಗ್ರಂಥಾಲಯವನ್ನು ನಿರ್ಮಿಸಿದ್ದ. ಅದರಲ್ಲಿ ನೂರಾರು ಅಮೂಲ್ಯ ಪುಸ್ತಕಗಳ ಸಂಗ್ರಹವಿತ್ತು. ಈ ಗ್ರಂಥಗಳಲ್ಲಿ ಹಲವು ಶ್ರೀರಂಗಪಟ್ಟಣದ ಕೊಳ್ಳೆಯ ಸಮಯದಲ್ಲಿ ನಾಶವಾಗಿ ಹೋಗಿವೆ.

ಕಟ್ಟಡಗಳು

ಟಿಪ್ಪೂ ಕಾಲದ ವಾಸ್ತು ರಚನೆಯನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು.

೧. ರಕ್ಷಣೆಗಾಗಿ ಕಟ್ಟಿದ ಕೋಟೆ ಕೊತ್ತಳಗಳು, ಮದ್ದಿನ ಮನೆಗಳು, ಭದ್ರನೆಲಮಾಳಿಗೆಗಳು, ಕಾರಾಗೃಹಗಳು.

೨. ಮಸೀದಿಗಳು, ಸಮಾಧಿಗಳು, ಅರಮನೆಗಳು

ರಾಜ್ಯವಿಸ್ತಾರವಾದಂತೆ ಅದರ ರಕ್ಷಣೆಗೆ ಕೋಟೆ ಕೊತ್ತಲಗಳು ಬೇಕು. ಹಳೆಯ ಕೋಟೆ ಕೊತ್ತಳಗಳನ್ನು ಭದ್ರಗೊಳಿಸಬೇಕು. ಟಿಪ್ಪೂವಿನ ಕಾಲದಲ್ಲಿ ಇಂಥ ಕೆಲಸಗಳು ಬೇಕಾದಷ್ಟು ನಡೆದವು. ಹೊಸ ಯುದ್ಧತಂತ್ರಕ್ಕೆ ಹೊಂದುವಂತೆ ಹಳೆಯ ಕೋಟೆಗಳನ್ನು ನವೀಕರಿಸಲಾಗುತ್ತಿತ್ತು. ಗಚ್ಚುಗಾರೆ ಹಾಕಿ ಭದ್ರಪಡಿಸಲಾಗುತ್ತಿತ್ತು. ಟಿಪ್ಪೂ ಫ್ರೆಂಚ್ ವಾಸ್ತು ಶಿಲ್ಪಿಗಳ ಸಹಾಯ ಪಡೆದುಕೊಂಡನು. ಯುರೋಪಿನ ತಂತ್ರವನ್ನು ಕೋಟೆಗಳ ನಿರ್ಮಾಣಕ್ಕೆ ಬಳಸಿಕೊಂಡನು. ದೇವನಹಳ್ಳಿ, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಪಾವಗಡಗಳಲ್ಲಿ ಟಿಪ್ಪು ಕೋಟೆಗಳನ್ನು ನಿರ್ಮಿಸಿದ್ದಾನೆ. ಅವು ಇಂದಿಗೂ ಒಳ್ಳೆಯ ಸ್ಥಿತಿಯಲ್ಲಿವೆ. ಸಕಲೇಶಪುರಕ್ಕೆ ಆರು ಕಿಲೋ ಮೀಟರ್ ದೂರದಲ್ಲಿ ಮಂಜರಾಬಾದ್ ಕೋಟೆ ಇದೆ. ಈ ಕೋಟೆಯನ್ನು ಇನ್ನೂರು ಅಡಿ ಎತ್ತರದ ಕಲ್ಲಿನ ಮೇಲೆ ಕಟ್ಟಿದ್ದಾರೆ. ಇದರ ಆಕಾರ ಎಂಟು ಮೂಲೆಗಳ ನಕ್ಷತ್ರದಂತಿದೆ. ಇದೊಂದು ಅಪರೂಪದ ರಚನೆ.

ದರಿಯಾ ದೌಲತ್

ಶ್ರೀ ರಂಗಪಟ್ಟಣದಲ್ಲಿ ಟಿಪ್ಪೂ ಕಟ್ಟಿಸಿರುವ ಅರಮನೆ 'ದರಿಯಾ ದೌಲತ್'. 'ದರಿಯಾ ದೌಲತ್' ಎಂದರೆ ಸಮುದ್ರದ ಸಂಪತ್ತು ಎಂದು ಅರ್ಥವಂತೆ. ಇದೊಂದು

ಸುಂದರವಾದ ಕಟ್ಟಡ. ಈಗಲೂ ಇದು ಒಳ್ಳೆಯ ಸ್ಥಿತಿಯಲ್ಲಿ ಉಳಿದುಕೊಂಡಿದೆ. ಇದು ಭಾರತದಲ್ಲಿಯೇ ಅಪರೂಪವಾದ ವಾಸ್ತು ರಚನೆ. ಪಾರಸೀ ಅರಮನೆಗಳ ವಿನ್ಯಾಸವನ್ನು ಅನುಸರಿಸಿ ಇದನ್ನು ನಿರ್ಮಿಸಲಾಗಿದೆ. ಈ ಅರಮನೆಯ ಗೋಡೆ, ಛಾವಣಿ, ಕಂಬಗಳ ಮೇಲೆ ಸುಂದರವಾದ ವರ್ಣಚಿತ್ರಗಳಿವೆ. ಟಿಪ್ಪೂ ಇದನ್ನು ತನ್ನ ಸ್ವಂತ ಮೇಲ್ವಿಚಾರಣೆಯಲ್ಲಿ ಕಟ್ಟಿಸಿದ.

ಬೆಂಗಳೂರಿನ ಅರಮನೆ

ಟಿಪ್ಪೂ ಬೆಂಗಳೂರಿನಲ್ಲಿ ಒಂದು ಅರಮನೆ ಕಟ್ಟಿಸಿದ್ದಾನೆ. ಇದು ಇಂದಿಗೂ ಒಳ್ಳೆಯ ಸ್ಥಿತಿಯಲ್ಲಿದೆ. ಇದು ಕಳೆದ ಐದು ಶತಮಾನಗಳಲ್ಲಿ ಕಟ್ಟಿಸಿದ ಕೆಲವು ಐತಿಹಾಸಿಕ ಕಟ್ಟಡಗಳಲ್ಲಿ ಒಂದು. ಈ ಅರಮನೆಗೆ ಟಿಪ್ಪೂ 'ರಷ್ಕ್ ಎ ಜನ್ನತ್' ಎಂದು ಹೆಸರಿಟ್ಟಿದ್ದಾನೆ. ಇದರರ್ಥ ಸ್ವರ್ಗಕ್ಕೆ ಹೊಟ್ಟೆಕಿಚ್ಚು ಬರಿಸುವಂಥದು ಎಂದು.

ಶ್ರೀರಂಗಪಟ್ಟಣದ ಮಸೀದಿ ಮಸ್‌ಜದ್ ಇ ಅಲ ಹೈದರನ ಸಮಾಧಿ ಇರುವ ಗುಂಬಜ್ ಇ ಅಲಿ, ಇವು ಟಿಪ್ಪೂ ಕಟ್ಟಿಸಿದ ಕೆಲವು ಮುಖ್ಯ ಕಟ್ಟಡಗಳು.

ನಾಣ್ಯಗಳು

ಟಿಪ್ಪೂವಿನ ಆಡಳಿತದಲ್ಲಿ ವ್ಯಾಪಾರ ವ್ಯವಹಾರಕ್ಕೆ ಬಹಳ ಪ್ರೋತ್ಸಾಹವಿತ್ತು. ವ್ಯವಹಾರ ಸುಗಮವಾಗಿ ನಡೆಯಲು ನಾಣ್ಯಗಳು ಬೇಕು. ಟಿಪ್ಪೂ ನಾಣ್ಯಗಳ ತಯಾರಿಕೆಗೂ ಪ್ರಾಮುಖ್ಯತೆ ನೀಡಿದ್ದ. ಆತನ ರಾಜ್ಯದಲ್ಲಿ ಸುಮಾರು ಹದಿನೈದು ಟಂಕಸಾಲೆಗಳಿದ್ದವು. ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳನ್ನು ನಾಣ್ಯ ತಯಾರಿಸಲು ಬಳಸುತ್ತಿದ್ದರು. ಒಂದೊಂದು ನಾಣ್ಯಕ್ಕೂ ಒಂದೊಂದು ಹೆಸರು ಇರುತ್ತಿತ್ತು. ಪ್ರವಾದಿ ಮಹಮದ್‌ರ ಹೆಸರು, ನಕ್ಷತ್ರಗಳ ಹೆಸರು, ಖಲೀಫರ ಹೆಸರುಗಳನ್ನು ಬಳಸುತ್ತಿದ್ದರು. ಅಹ್ಮದೀ, ಸಾದಿಕೀ, ಫರೂಕಿ, ಇಮಾಮಿ, ಬಾಖರಿ, ಜಾಫರೀ ಮುಂತಾದುವು ನಾಣ್ಯಗಳ ಹೆಸರುಗಳು.

ಹೈದರ್ ಆಲಿಯ ಉಪದೇಶ

ಸಂದರ್ಭ ಬಂದಾಗೆಲ್ಲ ಹೈದರ್ ಆಲಿಯು ಟಿಪ್ಪೂವಿಗೆ ಕೆಲವು ಹಿತ ವಚನಗಳನ್ನು ಹೇಳುತ್ತಿದ್ದ. ಈ ಉಪದೇಶ ಇಂದಿಗೂ ಅನ್ವಯಿಸುವಂತಹದು. ಇವು ಹೈದರಾಲಿಯು ಅನುಭವದಿಂದ ಕಂಡುಕೊಂಡಂತಹವು. ಟಿಪ್ಪೂಗೆ ಇವು ಮಾರ್ಗದರ್ಶಿ ಸೂತ್ರಗಳಾಗಿದ್ದವು. ಅವು ಏನೆಂದು ನೋಡೋಣ:

"ಧೂರ್ತ ಕಾರ್ಯಗಳಿಗೆ ಹೋಗಬೇಡ, ನಾನೇ ಸರ್ವಜ್ಞನೆಂದು ಹೇಳಿಕೊಳ್ಳಬೇಡ. ಮುಖಸ್ತುತಿಗೆ ಮರುಳಾಗಬೇಡ. ಮಾದಕ ದ್ರವ್ಯಗಳನ್ನು ಮುಟ್ಟಬೇಡ. ಎಷ್ಟೇ ಕಷ್ಟ ಬಂದರೂ ಧೈರ್ಯಗುಂದಬೇಡ. ರಾಜ್ಯದ ಹಣವನ್ನು ವಿಷದಂತೆ ಕಾಣು. ಅದರ ಚಿಕ್ಕಾಸನ್ನೂ ಸ್ವಂತಕ್ಕೆ ಬಳಸಿಕೊಳ್ಳಬೇಡ. ಸ್ವಾರ್ಥಪರನಾಗಬೇಡ. ಹಿಡಿದ ಕಾರ್ಯವು ಎಷ್ಟೇ ಚಿಕ್ಕದಿರಲಿ ಅದನ್ನು ಇತರರಿಗೆ ವಹಿಸಿ ಮೈ ಮರೆಯಬೇಡ. ಯಾವುದೇ ಕೆಲಸವನ್ನು ಎಚ್ಚರದಿಂದಲೂ ಮನಃಪೂರ್ವಕವಾಗಿಯೂ ಮಾಡು. ಪರಮತವನ್ನು ನಿವಾರಿಸಬೇಡ. ಪರಸ್ತ್ರೀಯರನ್ನು ನಿನ್ನ ಬಂಧು ಭಗಿನಿಯರಂತೆ ಕಾಣು. ಪೂರ್ವಿಕರ ಕಟ್ಟಳೆಗಳನ್ನು ಮೀರಬೇಡ. ತಪ್ಪು ಮಾಡಿದವರಿಗೆ ಕ್ರೂರ ಹಿಂಸೆ ಕೊಡಬೇಡ. ಸೆರೆಸಿಕ್ಕ ಶತ್ರುಗಳನ್ನು ಸಿಕ್ಕಾಬಟ್ಟೆ ದಂಡಿಸಬೇಡ. ಅನಾಥರ ಮೇಲೆ ಕರುಣೆಯಿರಲಿ. ದೇವಾಲಯವನ್ನು ಮಸೀದಿಯನ್ನು ಏಕಭಕ್ತಿಯಿಂದ ಕಾಣು. ಅಧಿಕಾರವನ್ನು ಯಾವ ಕಾರಣಕ್ಕೂ ದುರುಪಯೋಗ ಪಡಿಸಿಕೊಳ್ಳಬೇಡ."

* * *

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ
ಹಾಗೂ ಉಪಯುಕ್ತವಾದ ಪಠ್ … ್ತಕ ರಚನಾ
ವಿಭಾಗ'ವನ್ನು ತೆರೆದಿದೆ. … ್ತಕ ರಚನೆ
ಮಾಡಬೇಕೆಂದು ಚಿಂತಿಸುತಿ … ಕ್ಷರರಿಗಾಗಿ
ಪುಸ್ತಕ ಬರೆಸುವ ತಮ್ಮ … ಕೊಟ್ಟರು.
ವಿಶ್ವವಿದ್ಯಾಲಯವು ಈ ಯ … ಖಕರನ್ನು,
ಭಾಷಾತಜ್ಞರನ್ನು, ಶಿಕ್ಷಣತಜ್ಞ … ಭಿಪ್ರಾಯ,
ಸಲಹೆ, ಸಹಕಾರಗಳನ್ನು ಕೇ … ವಿನ್ಯಾಸ,
ಚಿತ್ರಗಳ ಮಹತ್ವ, ಸಾಹಿತ್ಯ … ಚರ್ಚಿಸಿ
ಯೋಜನೆಯನ್ನು ಅನುಷ್ಠಾನ …

ನವಸಾಕ್ಷರರಿಗಾಗಿ ಕನ್ನಡದ … ವಾಗಿರುವ
ಪುಸ್ತಕಗಳನ್ನೆಲ್ಲ ಒಟ್ಟುಗ … ತಜ್ಞರಿಂದ
ಪರಿಶೀಲಿಸಲಾಯಿತು. ಜೊತೆ … ಅವರಿಗೆ
ಕಮ್ಮಟಗಳನ್ನು ನಡೆಸಿ, ಪ್ರ … ಜಿಲ್ಲೆ,
ತಾಲೂಕುಗಳಿಗೆ ಕಳುಹಿಸಿ ಈ … ಅದರ
ಗುಣದೋಷಗಳ ಬಗ್ಗೆ ಅಭಿಪ್ರಾ … ಲಯದ
ಗಣಕಯಂತ್ರದಲ್ಲಿ ವಿಶ್ಲೇಷಿಸ … ನೀಡಿದ್ದ
ಮಾಹಿತಿಗಳನ್ನೆಲ್ಲ ಮರು ಪರಿ … ಷಯದ
ಆದ್ಯತೆಗಳನ್ನು ನಿರ್ಧರಿಸಿಕೊಂ … ನಮ್ಮ
ವಿಶ್ವವಿದ್ಯಾಲಯದ ಪ್ರಾಧ್ಯಾಪ … ಟ್ಟರು.
ಕಲಾವಿದರು ವಿಷಯಗಳಿಗೊಪ್ಪ … ಗಳನ್ನು
ನವಸಾಕ್ಷರರ ಬಳಿ ಕೊಂಡೊಯ್ … ಅಭಿಪ್ರಾಯ, ಪ್ರತಿಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು